# ಅನಂತಪಥ

ಸ್ವಾತಂತ್ರ್ಯ "ವೀರ" ಸಾವರ್ಕರ್
ವ್ಯಕ್ತಿ ವಿಶೇಷ (ಪುಟ 6)





ಸಂಪುಟ - 3 | ಜೂನ್ - 2023 | ಸಂಚಿಕೆ - 36


## ನಾಯಕತ್ವದ ಯಶಸ್ಸಿಗೆ ಅನಂತಸೂತ್ರ



1990ರ ದಶಕದ ಒಂದು ನೆನಪು. ಕರ್ನಾಟಕದ ಭಾರತೀಯ ಜನತಾ ಪಕ್ಷದ ಯುವಮುಖಂಡರೊಬ್ಬರು ಒಮ್ಮೆ ತಿರುಪತಿಗೆ ಹೋಗಿ ಮುಡಿ ಅರ್ಪಿಸಿ ಬಂದಿದ್ದರು. ಬೋಳುತಲೆ ಕಾಣದಂತೆ ಟೋಪಿಯೊಂದನ್ನು ಧರಿಸಿಕೊಂಡಿದ್ದರು. ಪಕ್ಷದ ಸಭೆಯೊಂದರಲ್ಲಿ ಅನಂತಕುಮಾರ್ ಟೋಪಿಧಾರಿ ಯುವಕನನ್ನು ಕಂಡವರೇ ಹತ್ತಿರಕ್ಕೆ ಕರೆದು, ಈ ಟೋಪಿ ನಿಮ್ಮ ತಲೆಯ ಮೇಲೆ ಶಾಶ್ವತವಾಗಿರಲಿ, ಹಾಗೆಯೇ ಇಟ್ಟುಕೊಂಡಿರಿ, ತೆಗೆಯಬೇಡಿ ಎಂದು ಸಲಹೆಕೊಟ್ಟರು. ಅನಂತಕುಮಾರರ ಸಲಹೆಗೆ ಒಪ್ಪಿ ಅವರು ಟೋಪಿಧಾರಿಯಾಗಿಯೇ ಉಳಿದರು. ಹಾಗೆ ಟೋಪಿಧಾರಿಯಾಗಿ ಮುಂದುವರಿದುದರಿಂದ ಅವರನ್ನು ಜನರು ನಿರ್ದಿಷ್ಟವಾಗಿ ಗುರುತಿಸಲು ಸಾಧ್ಯವಾಯಿತು. ಒಬ್ಬ ವ್ಯಕ್ತಿ ಜನರ ನಡುವೆ ನಾಯಕನಾಗಿ ಬೆಳೆಯಬೇಕಾದರೆ ಆತನ ಸ್ವರೂಪದ, ವೇಷಭೂಷಣದ ಯಾವುದೋ ಒಂದು ಅಂಶವೂ ಪೂರಕವಾಗಬಹುದು ಎಂಬ ಸೂಕ್ಷ್ಮವನ್ನು ಅನಂತಕುಮಾರ್ ಹೇಳಿಕೊಟ್ಟಿದ್ದರೆಂದು ಆ ಯುವಕನಿಗೆ ಮನವರಿಕೆಯಾಯಿತು. ಆತನೇ ಮುಂದೆ ಕರ್ನಾಟಕದ ವಿಧಾನಸಭಾ ಸದಸ್ಯರಾಗಿ, ಸಚಿವರಾಗಿ, ಪಕ್ಷದ ಹಿರಿಯ ಮುಖಂಡರಾಗಿ ಬೆಳೆದ ಕಟ್ಟಾ ಸುಬ್ರಹ್ಮಣ್ಯ ನಾಯ್ಡು!

ಅನಂತಕುಮಾರರ ಮಾರ್ಗದರ್ಶನದಲ್ಲಿ ಪಕ್ಷದ ಮುಖಂಡರಾಗಿ ಬೆಳೆದ ಅನೇಕರಲ್ಲಿ ಶ್ರೀ ಆರ್. ಅಶೋಕ್ ಅವರೂ ಒಬ್ಬರು. ಅನಂತಕುಮಾರರೊಡನೆ ಹೋಗುವಾಗಲೆಲ್ಲ ಅಶೋಕ್ ಅವರ ನಡೆವಳಿಕೆಯನ್ನು ಗಮನಿಸುತ್ತಿದ್ದರು. ತಮ್ಮೆದುರು ಯಾರೇ ಬರಲಿ, ಕಾಣಲಿ, ಅವರು ಬಡವರೋ ಬಲ್ಲಿದರೋ ಎಂಬ ಲಕ್ಷ್ಯವಿಲ್ಲದೆ ಅನಂತಕುಮಾರ್ ಎಲ್ಲರಿಗೂ ಮೊದಲು ತಾವಾಗಿಯೇ ನಮಸ್ಕರಿಸುತ್ತಿದ್ದರು. ಅನಂತಕುಮಾರರ ಈ ನಿರ್ದಿಷ್ಟ ವರ್ತನೆ ಅಶೋಕರಿಗೆ ಸರಿತೋರುತ್ತಿರಲಿಲ್ಲ. ನಾಯಕ, ಜನಪ್ರತಿನಿಧಿ ಎಂದಮೇಲೆ ಅವರಿಗೆ ಸಾಮಾನ್ಯರು ಗೌರವ ತೋರಿ ನಮಸ್ಕರಿಸುವುದು ಸರಿಯಾದ ಕ್ರಮ, ರೂಢಿ. ನಾಯಕನೇ ಮುಂದಾಗಿ ಜನಸಾಮಾನ್ಯನಿಗೆ ನಮಸ್ಕರಿಸುವುದೆಂದರೇನು? ಜನರ ದೃಷ್ಟಿಯಲ್ಲಿ ತಮ್ಮ ಬೆಲೆ ಕಡಿಮೆಯಾಗಿ ಬಿಡುವುದಿಲ್ಲವೇ? ಎಂಬುದು ಅಶೋಕರ ಅನಿಸಿಕೆ. ಅದನ್ನು ಅನಂತಕುಮಾರರಿಗೆ ನೇರವಾಗಿ ಹೇಳಿಯೂಬಿಟ್ಟರು. ಅಶೋಕ್ ಮಂಡಿಸಿದ ಅಭಿಪ್ರಾಯವನ್ನು ಅನಂತಕುಮಾರ್ ಒಪ್ಪಲಿಲ್ಲ. ಸಾಮಾನ್ಯ ಜನರಿಗೆ ತಮ್ಮ ಪ್ರತಿನಿಧಿಗಳ, ನಾಯಕರ ಕಣ್ಣಿಗೆ ಕಾಣಿಸಿಕೊಳ್ಳುವ ಅಪೇಕ್ಷೆಯೇನೋ ಇರುತ್ತದೆ. ನಾಯಕರು ಎದುರಿಗೆ ಬಂದಾಗ ಅವರಿಗೆ ನಮಸ್ಕರಿಸಿದರೂ ಮುಖಂಡನೆನಿಸಿಕೊಂಡವನು ಅವರ ಗೌರವವನ್ನು ಸ್ವೀಕರಿಸುವಷ್ಟು ವ್ಯವಧಾನ ತೋರದಿರುವುದೇ ಹೆಚ್ಚು. ಇದಕ್ಕೆ ಅವನ ಪ್ರತಿಷ್ಠೆ ಬಿಗುಮಾನಗಳು ಕಾರಣ; ಜೊತೆಗೆ, ತಾನೇನೂ ಪ್ರತಿಯಾಗಿ ನಮಸ್ಕರಿಸಬೇಕಾದ್ದಿಲ್ಲವೆಂಬ ಆತ್ಮಪ್ರತ್ಯಯ. ಇಂಥ ಸೆಡವು, ಬಿಗುಮಾನಗಳು ನಾಯಕನನ್ನು ಜನರಿಂದ ದೂರವೇ ಉಳಿಸುತ್ತವೆ. ಜನರಿಗೂ ನಾಯಕನು ತಮ್ಮನ್ನು ಗಮನಿಸುತ್ತಾನೋ ಇಲ್ಲವೋ ಎಂಬ ಅಳುಕು ಇರುತ್ತದೆ. ಅದಕ್ಕೆ ಬದಲಾಗಿ, ನಾಯಕನಾದವನು ತಾನೇ ಮೊದಲಿಗೆ ನಮಸ್ಕರಿಸುವುದರಿಂದ ಜನರಿಗೆ ಆ ನಾಯಕನು ತಮ್ಮವನೆಂಬ ಭಾವನೆ ಮೂಡಿ ಆತ್ಮೀಯತೆ ಬೆಳೆಯಲು ಸಹಕಾರಿಯಾಗುತ್ತದೆ. ಜನಸಾಮಾನ್ಯರೊಡನೆ ಸಂಪರ್ಕವು ನಿಕಟವೂ ನಿರಂತರವೂ ಆಗಿರಬೇಕಾದರೆ ನಾಯಕ ಒಣಪ್ರತಿಷ್ಠೆಯನ್ನು ತೊರೆದು ಎಲ್ಲರೊಳಗೆ ಒಂದಾಗಿರಲು ಯತ್ನಿಸುವುದೇ ಸರಿಯಾದ ಮಾರ್ಗ ಎಂದು ಅನಂತಕುಮಾರ್ ತಿಳಿಹೇಳಿದರು. ಪ್ರಜೆಗಳು ಕಿರಿಯರಿರಲಿ ಹಿರಿಯರಿರಲಿ, ಅವರೇ ತಮಗೆ ನಮಸ್ಕರಿಸಲೆಂಬ ನಿರೀಕ್ಷೆಯ ಬದಲಿಗೆ ಅವರ ಕಣ್ಣಲ್ಲಿ ಕಣ್ಣಿರಿಸಿ ತಾನೇ ನಮಸ್ಕರಿಸಬೇಕಾದುದು ನಾಯಕನಾದವನ ಜವಾಬ್ದಾರಿ ಎಂದು ಅನಂತಕುಮಾರ್ ನಂಬಿದ್ದರು. ಚುನಾವಣೆಯ ಸನ್ನಿವೇಶದಲ್ಲಿ ಮಾತ್ರವೇ ಅಲ್ಲ, ಯಾವುದೇ ಕಾಲದಲ್ಲೂ ತಮ್ಮೆದುರು ಬಂದ ಸರ್ವರಿಗೂ ತಾವಾಗಿಯೇ ನಮಸ್ಕರಿಸುವುದು, ಅನಂತಕುಮಾರರಿಗೆ ರೂಢಿಯಾಗಿತ್ತು.

(ಪುಟ 4 ರಲ್ಲಿ ಮುಂದುವರೆದಿದೆ)




### ಅನಂತಪಥ ಮಾಸಪತ್ರಿಕೆಯ ಬಿಡುಗಡೆ


ಅನಂತಪಥ ಮಾಸ ಪತ್ರಿಕೆಯ 35ನೇ ಸಂಚಿಕೆಯನ್ನು ಕಣ್ಣೂರಿನ ಶಾಂತಿ ಕುಟೀರ ಆಶ್ರಮದ ಶ್ರೀ ಕೃಷ್ಣ ಸಂಪಗಾಂವಕರ ಅವರು 22 ಮೇ 2023 ರಂದು ಹುಬ್ಬಳ್ಳಿಯ ಅನಂತ ಪ್ರೇರಣಾ ಕೇಂದ್ರದಲ್ಲಿ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಶ್ರೀಮತಿ ಸುವಾಸಿನಿ, ಶ್ರೀಮತಿ ಐಶ್ವರ್ಯಾ ಅನಂತಕುಮಾರ್, ಶ್ರೀಮತಿ ಅನಘಾ ಲಿಮಯೆ, ಕು. ವಿಜೇತಾ ಅನಂತಕುಮಾರ್, ಶ್ರೀ ಅಶೋಕ್ ಪಾಳಂದೆ, ಶ್ರೀ ಡಿ. ಆರ್. ಸುಬ್ರಹ್ಮಣ್ಯ ಮೊದಲಾದವರು ಭಾಗವಹಿಸಿದ್ದರು.

# ಹಾಸನ ಜಿಲ್ಲೆಯ ಕೆಲವು ದೇವಾಲಯಗಳು (3)

ದೇಗುಲದರ್ಶನ ಮಾಲಿಕೆ - 23











ದೇಗುಲ ದರ್ಶನದ ಈ ಸಂಚಿಕೆಯಲ್ಲಿ ಹಾಸನ ಜಿಲ್ಲೆಯ ಮತ್ತಷ್ಟು ಪುರಾತನ ದೇವಾಲಯಗಳನ್ನು ಪರಿಚಯ ಮಾಡಿಕೊಳ್ಳೋಣ. ಈ ಭಾಗದಲ್ಲಿ ಚನ್ನರಾಯಪಟ್ಟಣದ ಆಸುಪಾಸಿನ ಕೆಲವು ಸ್ಥಳಗಳನ್ನು ಸಂದರ್ಶಿಸ ಬಹುದು.

ತಾಲೂಕು ಕೇಂದ್ರವಾದ ಚನ್ನರಾಯಪಟ್ಟಣ ಹಾಸನದಿಂದ 45 ಕಿಮೀ ದೂರದಲ್ಲಿದೆ. ಇಲ್ಲಿರುವ ಹಲವು ಪುರಾತನ ದೇವಾಲಯಗಳಲ್ಲಿ ಶ್ರೀ ಚಂದ್ರಮೌಳೇಶ್ವರ ಮತ್ತು ಚನ್ನಕೇಶವ ದೇವಾಲಯಗಳು ಪ್ರಮುಖವಾದವು. 1673 ರಲ್ಲಿ ಬಸವಯ್ಯನೆಂಬ ಪಾಳೇಗಾರನು ನಿರ್ಮಿಸಿದ ಚಂದ್ರಮೌಳೇಶ್ವರ ದೇವಾಲಯದಲ್ಲಿ ಶಿವನ ಮೂರ್ತಿರೂಪಕ್ಕೆ ಪೂಜೆ ಸಲ್ಲುತ್ತಿರುವುದು ವಿಶೇಷ. ಭವ್ಯವಾದ ಶಿಲಾಮೂರ್ತಿ ಶಿವನ ಕೈಗಳಲ್ಲಿ ಪರಶು, ಮೃಗಗಳನ್ನು ಧರಿಸಿ ನಿಂತಿರುವ ಭಂಗಿ ವಿಶೇಷವಾಗಿದೆ. ಒಳಗುಡಿಯ ಹೊರಬಾಗಿಲಲ್ಲಿ ದ್ವಾರಪಾಲಕರ ಬದಲಿಗೆ ಕೈಮುಗಿದು ನಿಂತ ಇಬ್ಬರು ಭಕ್ತರ ಪ್ರತಿಮೆಗಳಿದ್ದು, ಈ ಗುಡಿಯನ್ನು ನಿರ್ಮಿಸಿದ ರಾಜಪುರುಷರಿರಬಹುದು. ನಡುಮಂಟಪದಲ್ಲಿರುವ ಗಣೇಶ, ವೀರಭದ್ರ, ಭೈರವ, ಕೇಶವ ಮೊದಲಾದ ಶಿಲ್ಪಗಳು ಆಕರ್ಷಕವಾಗಿವೆ. ಪ್ರತ್ಯೇಕವಾದ ಗುಡಿಯಲ್ಲಿ ದೇವಿಯ ಮೂರ್ತಿಯಿದೆ.

ಚನ್ನಕೇಶವನ ಗುಡಿ ಹೊಯ್ಸಳರ ಪ್ರಾರಂಭ ಕಾಲದಷ್ಟು ಹಳೆಯದು. ಹೊರಭಿತ್ತಿಗಳಲ್ಲಿ ವಿಶೇಷ ಕೆತ್ತನೆಗಳಿಲ್ಲ. ಆದರೆ ಒಳಗುಡಿಯ ಶಿಲ್ಪಗಳೂ ನವರಂಗದ ವಿನ್ಯಾಸವೈವಿಧ್ಯವೂ ಸೊಗಸಾಗಿವೆ. ಗರ್ಭಗುಡಿಯಲ್ಲಿ ಚನ್ನಕೇಶವನ ವಿಗ್ರಹವಿದೆ. ನಡುಮಂಟಪದಲ್ಲಿ ನಂತರದ ಕಾಲದ ಕಾಳಿಂಗಮರ್ದನ ಕೃಷ್ಣ, ರಂಗನಾಥ, ಆಳ್ವಾರರು ಮೊದಲಾದ ಶಿಲ್ಪಗಳಿವೆ. ಹಾಸನ ಜಿಲ್ಲೆಯಲ್ಲಿಯೇ ಹೊಯ್ಸಳ ಕಾಲದ ಅನೇಕ ಕೇಶವದೇವಾಲಯಗಳಿದ್ದು ಆನೆಕೆರೆ, ಚಿಕ್ಕಗಂಡಸಿ ಗುಡಿಗಳು ಚನ್ನರಾಯಪಟ್ಟಣದ ಸನಿಹದಲ್ಲೇ ಇವೆ. 12 ನೇ ಶತಮಾನಕ್ಕೆ ಸೇರಿದ ಆನೆಕೆರೆಯ ಹೊಯ್ಸಳರ ಕಾಲದ ಕೇಶವನ ಗುಡಿ ಚಿಕ್ಕದಾದರೂ ವಿಶಾಲವಾದ ಪ್ರಾಕಾರಮಂಟಪ, ಕಕ್ಷಾಸನ, ಶಿಖರ ಕಳಶಗಳು ಗಮನ ಸೆಳೆಯುವಂತಿವೆ. ಕೇಶವನ ವಿಗ್ರಹ ಆಕರ್ಷಕವಾಗಿದೆ. ಇದಕ್ಕೆ ಹೋಲಿಸಿದರೆ, ಚಿಕ್ಕಗಂಡಸಿಯ ಗುಡಿ ತೀರಾ ಚಿಕ್ಕದು. ಶಿಥಿಲಾವಸ್ಥೆಯಲ್ಲಿದ್ದರೂ ಕೇಶವನ ಶಿಲ್ಪ ಸುಂದರವಾಗಿದೆ. ಇನ್ನೊಂದು ಗರ್ಭಗುಡಿಯಲ್ಲಿರುವ ವೇಣುಗೋಪಾಲನ ಶಿಲ್ಪವು ಹೊಯ್ಸಳಶೈಲಿಯ ಸುಂದರವಾದ ವಿಗ್ರಹವಾಗಿದೆ. ಚಿಕ್ಕಗಂಡಸಿಯ ಸಮೀಪದಲ್ಲಿರುವ ಹೆಗ್ಗಟ್ಟದಲ್ಲಿ ಸಪ್ತಮಾತೃಕಾ ದೇವಾಲಯವಿದೆ. ಅಂದಾಜು 400 ವರುಷಗಳಷ್ಟು ಹಳೆಯ ಈ ಗುಡಿಯಲ್ಲಿ ಬ್ರಾಹ್ಮಿ, ಕೌಮಾರಿ, ವಾರಾಹಿ ಮತ್ತಿತರ ದೇವಿಯ ಸಪ್ತರೂಪಗಳು ಪ್ರತ್ಯೇಕ ಪ್ರತಿಮೆಗಳಾಗಿ ನೆಲೆಗೊಂಡಿವೆ. ಪಕ್ಕದಲ್ಲೇ ಸಿದ್ದೇಶ್ವರನ ಹಳೆಯದೊಂದು ಗುಡಿ. ಹೆಗ್ಗಟ್ಟದಲ್ಲಿರುವ ಹೊಯ್ಸಳ ಕಾಲದ ಗುಡಿಯಲ್ಲಿ ವಿಷ್ಣುವಿನ ವಿಗ್ರಹವಿರುವುದು ವಿಶೇಷ. ಬಲಮೇಲುಗೈಯಿಂದ ಅನುಕ್ರಮವಾಗಿ ನಾಲ್ಕು ಕೈಗಳಲ್ಲಿ ಪದ್ಮ, ಶಂಖ, ಚಕ್ರ ಮತ್ತು ಗದೆಗಳನ್ನು ಧರಿಸಿರುವ ಮೂರ್ತಿಯಿದು.

ಹುಲ್ಲೇಕೆರೆಯಲ್ಲೂ ಕೇಶವನ ದೇವಾಲಯವಿದೆ. 1163ರಲ್ಲಿ ದಂಡನಾಯಕ ಬೂಚಿರಾಜ ಕಟ್ಟಿಸಿದ ಗುಡಿಯ ಹೊರನೋಟ ಹೊಯ್ಸಳ ವಾಸ್ತುಶಿಲ್ಪದ ವೈಭವವನ್ನು ಪ್ರಕಟಿಸುವಂತಿದೆ. ಹೊರಬಾಗಿಲ ಇಕ್ಕೆಲಗಳಲ್ಲಿರುವ ಆನೆಗಳು, ಹೊರಭಿತ್ತಿಯ ಮೇಲಿನ ಕಿರುಗೋಪುರಗಳ ವಿನ್ಯಾಸ, ಸೂರಿನ ಅಂಚಿನ ಕೈಪಿಡಿಯಲ್ಲಿ ಕೀರ್ತಿಮುಖಗಳೊಳಗೆ ದೇವತಾಶಿಲ್ಪಗಳು, ಶಿಖರ, ಕಲಶಗಳೆಲ್ಲವೂ ಸೊಗಸಾಗಿವೆ. ಕಟ್ಟಡವೂ ಶಿಲ್ಪಗಳೂ ಕಿಡಿಗೇಡಿಗಳ ದೆಸೆಯಿಂದ ಹಾನಿಗೀಡಾಗಿದ್ದರೂ ಸೌಂದರ್ಯ ಕೆಡದಂತಿದೆ. ಈ ಭಾಗದ ಹೊಯ್ಸಳ ದೇಗುಲಗಳಲ್ಲಿ ನುಗ್ಗೇಹಳ್ಳಿಯ ಲಕ್ಷ್ಮೀನರಸಿಂಹದೇವಾಲಯ ಹೊರಭಿತ್ತಿಯುದ್ದಕ್ಕೂ ಅಲಂಕೃತವಾದ ದೇವತಾಶಿಲ್ಪಗಳಿಂದ ಅತ್ಯಾಕರ್ಷಕವೆನಿಸುತ್ತದೆ. 13ನೇ ಶತಮಾನದ ಖ್ಯಾತ ಶಿಲ್ಪಿ ಮಲ್ಲಿತಂಮನ ಹಿರಿತನದಲ್ಲಿ ನೂರಾರು ದೇವತಾಶಿಲ್ಪಗಳೇ ಅಲ್ಲದೆ, ಸಾಲುಪಟ್ಟಿಕೆಗಳಲ್ಲಿ ಪೌರಾಣಿಕ ಕಥೆಗಳು, ವಾಹನಗಳು, ಪ್ರಾಣಿಗಳು, ರಾಜವೈಭವ, ಜನಜೀವನ ಎಲ್ಲವೂ ಚಿತ್ರಿತವಾಗಿವೆ. ಒಳಗುಡಿಯಲ್ಲಿ ಲಕ್ಷ್ಮೀದೇವಿಯಲ್ಲಿ ತೊಡೆಯ ಮೇಲೆ ಕುಳ್ಳಿರಿಸಿಕೊಂಡ ನರಸಿಂಹನ ವಿಗ್ರಹವಿದೆ.

ನುಗ್ಗೇಹಳ್ಳಿಯ ಸದಾಶಿವ ದೇವಾಲಯದ ಶಿಖರವು ವಿಶಿಷ್ಟರೀತಿಯಲ್ಲಿದ್ದು, ಹಲವು ಕಿರುಶಿಖರಗಳ ಸಮುಚ್ಚಯದಂತೆ ಗೋಚರಿಸುತ್ತದೆ. ಭೂಮಿಜ ಶಿಖರವೆಂದು ಗುರುತಿಸುವ ಈ ಶಿಖರ ಔತ್ತರೇಯ ಶೈಲಿಯದು. ಇವೆರಡೂ ಗುಡಿಗಳನ್ನು 1246-1249ರ ಅವಧಿಯಲ್ಲಿ ಬೊಮ್ಮಣ್ಣ ದಂಡನಾಯಕ ಕಟ್ಟಿಸಿದ. ಹತ್ತಿರದ ಬಾಗೂರು ಗ್ರಾಮದಲ್ಲಿರುವ ದೇವಾಲಯದಲ್ಲಿರುವ ವೇಣುಗೋಪಾಲನ ಮೂರ್ತಿ ಹೊಯ್ಸಳ ಶೈಲಿಯಲ್ಲಿದ್ದು, ಅತ್ಯಂತ ಸುಂದರವಾಗಿದೆ. ಕೊಳಲೂದುತ್ತ ತ್ರಿಭಂಗಿಯಲ್ಲಿ ನಿಂತ ಕೃಷ್ಣ, ಗೋಪಿಕೆಯರು, ಗೋವುಗಳು ಮೊದಲುಗೊಂಡು ಚಿತ್ರಿತವಾದ ಎಲ್ಲ ಅಂಶಗಳೂ ಮನಸೆಳೆಯುವಂತಿವೆ.

**ಟಿ.ಎಸ್. ಗೋಪಾಲ್/ ಕೆಂಗೇರಿ ಚಕ್ರಪಾಣಿ**

LINK- http://YouTube.com/AnanthkumarPratishthana

# ಅನಂತಯಾನ ಅಧ್ಯಾಯ- 12 ಪಂಡಿತರ ಜಾತಕ!

ನಿರೂಪಣೆ : ಟಿ.ಎಸ್. ಗೋಪಾಲ್

ಕಾಲದ ಬದಲಾವಣೆಗಳಿಗೆ ತಲೆಕೆಡಿಸಿಕೊಳ್ಳದೆ, ಜೀವನ, ವ್ಯಕ್ತಿತ್ವಗಳಲ್ಲಿ ಏಕರೀತಿಯಾಗಿದ್ದವರೆಂದರೆ ನಾರಾಯಣಶಾಸ್ತ್ರಿಗಳೇ. ಎತ್ತರದ ಆಕಾರಕ್ಕೆ ತಕ್ಕ ಗಾಂಭೀರ್ಯ, ಸೌಮ್ಯ ಸ್ವಭಾವ. ಗಿರಿಜಾ ಶಾಸ್ತ್ರಿ ಎಷ್ಟು ಮಾತುಗಾರರೋ ಶಾಸ್ತ್ರಿಯವರು ಅಷ್ಟೇ ಮಿತಭಾಷಿ. ಸಾಮಾಜಿಕ ಸೇವೆ, ಚಟುವಟಿಕೆಗಳೆಂದರೆ ಅಲಕ್ಷ್ಯವೆಂದೇನೂ ಇಲ್ಲ. ಆದರೆ ಯಾವ ಪ್ರಚಾರಪ್ರಿಯತೆಯೂ ಅವರಲ್ಲಿ ಕಂಡುಬರದು.

ನಾರಾಯಣ ಶಾಸ್ತ್ರಿಯವರ ಜ್ಯೋತಿಷ್ಯಜ್ಞಾನ ಮೇಲ್ಮಟ್ಟದ್ದು. ಜಾತಕ ಬರೆದುಕೊಡುವುದರಿಂದ ಗ್ರಹಗತಿಗಳ ವಿವರಣೆಯವರೆಗೂ ಅವರ ತಿಳಿವಳಿಕೆ ವ್ಯಾಪಕವಾದುದು. ತಾವು ಕಲಿತ ಜ್ಯೋತಿಷ್ಯವಿದ್ಯೆಯನ್ನು ಶಾಸ್ತ್ರಿಗಳು ವ್ಯಾವಹಾರಿಕವಾಗಿ ಬಳಸಲು ಎಂದೂ ಮುಂದಾಗಲಿಲ್ಲ. ತಮ್ಮ ಪರಿಚಿತ ವಲಯದಲ್ಲಿ ಯಾರಾದರೂ ತೊಂದರೆ ತಾಪತ್ರಯಗಳನ್ನು ಹೇಳಿಕೊಳ್ಳುವಾಗ, ಶಾಸ್ತ್ರಿಗಳು ಜ್ಯೋತಿಷ್ಯದ ರೀತ್ಯಾ ತಮಗೆ ತೋರಿದ ಪರಿಹಾರವನ್ನು ಹೇಳುತ್ತಿದ್ದರು. ಹನುಮಂತರಾವ್ ಮತ್ತವರ ಹಲವರು ಸಹೋದ್ಯೋಗಿಗಳು ತಮ್ಮ ಮಕ್ಕಳ ಜಾತಕಗಳನ್ನು ಶಾಸ್ತ್ರಿಗಳಿಂದಲೇ ಬರೆಸಿಕೊಂಡಿದ್ದರು. ಅವರಂತೆಯೇ ಶಾಸ್ತ್ರಿಗಳ ಜ್ಯೋತಿಷಜ್ಞಾನವೂ ಅನೇಕರ ನೆರವಿಗೆ ಒದಗಿ ಬಂದಿದ್ದುಂಟು.

ಇಷ್ಟಾದರೂ ಶಾಸ್ತ್ರಿಗಳು ತಮ್ಮ ಜ್ಞಾನವನ್ನು ಮೆರೆಸಿದವರಲ್ಲ. ತಮ್ಮಿಂದ ಜಾತಕ ಬರೆಯಿಸಿಕೊಂಡವರೋ, ಜ್ಯೋತಿಷದ ಪರಿಹಾರ ಪಡೆದವರೋ ಏನಾದರೂ ದಕ್ಷಿಣೆ ಕೊಡಲು ಮುಂದಾದರೆ ಶಾಸ್ತ್ರಿಗಳು ನಿರ್ದಾಕ್ಷಿಣ್ಯವಾಗಿ ನಿರಾಕರಿಸುವರು. ಏನೋ ತನಗೆ ತಿಳಿದಿದ್ದನ್ನು ಹೇಳಿದ್ದೇನೆ, ಕೇಳಿದವರಿಗೆ ಸಹಾಯ ಮಾಡಿದ್ದೇನೆ. ಇದು ಪ್ರತಿಫಲ ಬಯಸಿ ಮಾಡಿದ್ದಲ್ಲ, ನನ್ನ ಹೊಟ್ಟೆಪಾಡಿಗೆ ಉದ್ಯೋಗ ಇದೆ. ನನ್ನ ಜ್ಯೋತಿಷಜ್ಞಾನದಿಂದ ಅಗತ್ಯವಿದ್ದವರಿಗೆ ಸಹಾಯವಾಗಲಿ, ಅದರಿಂದ ಸಂಪಾದನೆ ಮಾಡುವಂಥ ಯಾವ ಉದ್ದೇಶವೂ ತಮಗಿಲ್ಲ ಎಂದು ಶಾಸ್ತ್ರಿಗಳು ಸ್ನೇಹಿತರೊಡನೆ ತಮ್ಮ ನಿಲುವನ್ನು ಸ್ಪಷ್ಟಪಡಿಸುತ್ತಿದ್ದರು. ಇದು ಶಾಸ್ತ್ರಿಯವರ ಸಾಮಾಜಿಕ ಸೇವೆಯ ಒಂದು ಅಜ್ಞಾತಮುಖವೆನ್ನಬಹುದು.

ರಂಗರಾಜರಂಥವರಿಗೆ ಜ್ಯೋತಿಷ್ಯದ ತಿಳುವಳಿಕೆ ಇರಲಿಲ್ಲ. ಆದರೆ, ಅವರ ಸಹೋದ್ಯೋಗಿಗಳಲ್ಲೊಬ್ಬರಾದ ವೆಂಕಟರಮಣ ಜೋಯಿಸರು ಶಾಸ್ತ್ರಿಗಳಂತೆ ಜ್ಯೋತಿಷ್ಯದಲ್ಲಿ ಜ್ಞಾನವುಳ್ಳವರು. ಅವರಿಬ್ಬರೂ ಜ್ಯೋತಿಷ್ಯ ಶಾಸ್ತ್ರದ ವಿಷಯವನ್ನು ಕುರಿತು ಒಮ್ಮೊಮ್ಮೆ ಸುದೀರ್ಘ ಚರ್ಚೆ ನಡೆಸುವುದಿತ್ತು. ಅಂಥ ಸಂದರ್ಭಗಳಲ್ಲಿ ಕೇಳುಗರಾಗಿದ್ದ ರಂಗರಾಜನ್ ಮತ್ತಿತರ ಗೆಳೆಯರಿಗೆ ಶಾಸ್ತ್ರಿಯವರ ತಿಳುವಳಿಕೆಯ ಅಗಾಧತೆಯ ಬಗೆಗೆ ಅಚ್ಚರಿ ಮೂಡುತ್ತಿತ್ತು.

ಯಾವುದೇ ಒಂದು ವಿಷಯದಲ್ಲಿ ತಾವು ಪಡೆದ ತಿಳುವಳಿಕೆಯ ಬಗೆಗೆ ನಾರಾಯಣ ಶಾಸ್ತ್ರಿಯವರಿಗೆ ಅತ್ಯಂತ ವಿಶ್ವಾಸವಿದ್ದುದು ಗಮನಾರ್ಹ. ತಮ್ಮ ಪೂರ್ವಿಕರಿಂದ ಬಳುವಳಿಯಾಗಿ ಬಂದ ಜ್ಯೋತಿಷ್ಯ ಶಾಸ್ತ್ರದ ಬಗೆಗಿನ ತಮ್ಮ ಪರಿಜ್ಞಾನದ ಬಗೆಗೂ ಶಾಸ್ತ್ರಿಗಳಿಗೆ ಅದೇ ಪರಿಯ ಆತ್ಮವಿಶ್ವಾಸವಿದ್ದಿತು. ಅವರ ಮಾತಿನಲ್ಲಿರುತ್ತಿದ್ದ ನಿರ್ದುಷ್ಟತೆ, ಖಚಿತತೆಗಳಿಂದ ಕೇಳುವವರಿಗೂ ಸಂಶಯವಿಲ್ಲದಂತಾಗಿ ನೆಮ್ಮದಿ, ಸಮಾಧಾನ ಮೂಡುತ್ತಿತ್ತು.


ಒಮ್ಮೆ ರಂಗರಾಜನ್‌ರವರನ್ನು ಕಾಣಲು ಬಂದ ಸ್ನೇಹಿತರೊಬ್ಬರು ಅವರೊಡನೆ ತಮ್ಮ ಚಿಂತೆಯನ್ನು ಹೇಳಿಕೊಂಡರು. ಆತ ತನ್ನ ಮಗಳಿಗೆ ಗಂಡು ಹುಡುಕುತ್ತಿದ್ದರು. ಒಳ್ಳೆಯ ಸಂಬಂಧವೆಂದು ಹೇಳಿ ಅವರಿಗೆ ಯಾರೋ ವರನ ಜಾತಕವೊಂದನ್ನು ಕಳುಹಿಸಿಕೊಟ್ಟಿದ್ದರು. ಜ್ಯೋತಿಷಿಯೊಬ್ಬರಿಗೆ ಆ ಜಾತಕವನ್ನು ತೋರಿಸಿದಾಗ, ಆ ಜಾತಕದಲ್ಲಿ ಗುಣವಿಲ್ಲವೆಂದೂ ಸಂಬಂಧ ಕೂಡಿ ಬರುವುದಿಲ್ಲವೆಂದೂ ಹೇಳಿದ್ದರಂತೆ.

ಆಗ ರಂಗರಾಜನ್, "ಅಲ್ಲಯ್ಯ, ನಮ್ಮ ಶಾಸ್ತ್ರಿಗಳೇ ಇರುವಾಗ ನೀನು ಬೇರೆ ಯಾರಿಗೋ ಜಾತಕ ತೋರಿಸುವುದಕ್ಕೆ ಯಾಕೆ ಹೋದೆ? ಇರಲಿ, ಅವರನ್ನೂ ಒಂದು ಮಾತು ಕೇಳೋಣ ನಡಿ " ಎಂದು ಗೆಳೆಯನನ್ನು ಶಾಸ್ತ್ರಿಯವರಲ್ಲಿಗೆ ಕರೆದುಕೊಂಡು ಹೋದರು. ಜಾತಕವನ್ನು ಕೈಯಲ್ಲಿ ಹಿಡಿದ ಶಾಸ್ತ್ರಿಗಳು ಕ್ಷಣಕಾಲ ಅದನ್ನೇ ದಿಟ್ಟಿಸಿದರು. ಗೆಳೆಯರು ನೋಡುತ್ತಿದ್ದಂತೆಯೇ ಶಾಸ್ತ್ರಿಯವರ ಕಣ್ಣಲ್ಲಿ ಮಿಂಚು ಮೂಡಿತು.

"ಓ ಎಂಥಾ ಜಾತಕ ತಂದಿದ್ದೀಯಾ ! ಇದು ಬಿ.ವಿ.ಪಂಡಿತರ ಜಾತಕ ಕಣಯ್ಯಾ.." ಎಂದು ಉದ್ಗರಿಸಿದರು. ಬಂದವರಿಗೆ ಏನೂ ಅರ್ಥವಾಗದೆ ಶಾಸ್ತ್ರಿಗಳನ್ನೇ ದಿಟ್ಟಿಸಿ ಬೆರಗಾಗಿ ನೋಡುತ್ತಿದ್ದರು. ಗೆಳೆಯರತ್ತ ದೃಷ್ಟಿ ಹೊರಳಿಸಿದ ಶಾಸ್ತ್ರಿಗಳು ಅವರ ಮುಖಗಳಲ್ಲಿ ಅರ್ಥವಾಗದ ಗೊಂದಲವನ್ನು ಕಂಡು ಮುಗುಳ್ನಕ್ಕರು.

"ಬಿ.ವಿ.ಪಂಡಿತರು ಯಾರೆಂದು ಗೊತ್ತಿಲ್ಲವೇನ್ರಯ್ಯ? ಆತ ನಂಜನಗೂಡಿನಲ್ಲಿ ಕಪಿಲಾ ನದಿಯ ಮರಳು ಪುಡಿ ಮಾಡಿ, ಹಲ್ಲುಪುಡಿ ತಯಾರಿಸಿ ಲೋಕಪ್ರಸಿದ್ಧಿ ಗಳಿಸಲಿಲ್ಲವೇ? ಅವರ ಆಯುರ್ವೇದ ಔಷಧಿಗಳು ಪ್ರಪಂಚದಲ್ಲೆಲ್ಲ ಹೆಸರು ಮಾಡಿಲ್ಲವೇ? ಹಾಗೆಯೇ ಈ ಜಾತಕಕ್ಕೂ ಉನ್ನತಿಗೇರುವ ಯೋಗ ಇದೆ. ಜಾತಕದಲ್ಲಿ ಗ್ರಹಗತಿಗಳನ್ನು ತಾತ್ಕಾಲಿಕ ಲಕ್ಷಣದ ಆಧಾರದಲ್ಲಿ ಪರಿಗಣಿಸಬಾರದು. ದೀರ್ಘಕಾಲೀನ ಪರಿಣಾಮಗಳನ್ನು ಗಮನಿಸಿದರೇನೆ ಯೋಗ ಎಂಥದು ಅನ್ನೋದು ಗೊತ್ತಾಗೋದು. ಈ ವರನಿಗೆ ನಿಮ್ಮ ಮಗಳನ್ನು ಕೊಟ್ಟು ಮದುವೆ ಮಾಡು. ಚಿಂತಿಸಬೇಕಾದ್ದೇ ಇಲ್ಲ" ಎಂದರು.

ಶಾಸ್ತ್ರಿಗಳ ಮಾತಿನಲ್ಲಿದ್ದ ವಿಶ್ವಾಸ, ಖಚಿತತೆ ಕಂಡು ಬಂದ ಮಿತ್ರನಿಗೆ ತುಂಬ ಸಂತೋಷವಾಯಿತು. ಆತ ಮಗಳ ಮದುವೆ ನೆರವೇರಿದಷ್ಟೇ ಸಂತೋಷಪಟ್ಟುಕೊಂಡು ಹೊರಟರು. ನಾರಾಯಣ ಶಾಸ್ತ್ರಿಗಳ ಜ್ಯೋತಿಷ್ಯ ಪರಿಜ್ಞಾನವನ್ನು ಯಾವುದೋ ದೈವೀಶಕ್ತಿಯ ಅನುಗ್ರಹವೆಂದೇ ರಂಗರಾಜನ್ ಭಾವಿಸುತ್ತಾರೆ.



ಪುಟ 1 ರಿಂದ

# ನಾಯಕತ್ವದ ಯಶಸ್ಸಿಗೆ ಅನಂತಸೂತ್ರ

ಹೀಗೆ ನಾಯಕತ್ವದ ಸ್ಥೂಲಸೂಕ್ಷ್ಮಗಳೆಲ್ಲದರ ಅರಿವುಳ್ಳ ಅಪೂರ್ವರಾಜಕಾರಣಿಯಾಗಿದ್ದ ಅನಂತಕುಮಾರ್ ದಿನಬೆಳಗಾಗುವುದರಲ್ಲಿ ದಿಢೀರನೆ ಜನನಾಯಕನ ಪಟ್ಟಕ್ಕೇರಿದವರಲ್ಲ. ಚಿಕ್ಕಂದಿನಿಂದಲೂ ನಾಯಕತ್ವದ ಗುಣಲಕ್ಷಣಗಳನ್ನು ಹಂತಹಂತವಾಗಿ, ಕ್ರಮಬದ್ಧವಾಗಿ ಮೈಗೂಡಿಸಿಕೊಂಡು ಬೆಳೆದವರು. ತಂದೆತಾಯಿಯವರ ಬೋಧನೆ, ಸಂಸ್ಕಾರ, ಮಾರ್ಗದರ್ಶನಗಳು ಬಾಲಕ ಅನಂತಕುಮಾರನ ಗುಣಶೀಲಗಳ ಬೆಳವಣಿಗೆಗೆ ದಾರಿತೋರಿದರೆ, ಸಂಘದ ಚಟುವಟಿಕೆಗಳು, ವಿದ್ಯಾರ್ಥಿ ಪರಿಷತ್ತಿನ ಅನುಭವಗಳು ಆತನಲ್ಲಿ ನಾಯಕತ್ವದ ಹೊಳಹುಹುಮ್ಮಸ್ಸುಗಳನ್ನು ತುಂಬಿದವು. ಎಳೆಯ ವಯಸ್ಸಿಗೆ ಮೀರಿದ ಸಾಹಸಪ್ರವೃತ್ತಿ, ಅಸಾಧಾರಣ ನೆನಪಿನ ಶಕ್ತಿ, ವಿಷಯಗಳನ್ನು ಗ್ರಹಿಸಿ ಧಾರಣೆ ಮಾಡಬಲ್ಲ ಸಾಮರ್ಥ್ಯ - ಇವೆಲ್ಲವೂ ಹುಟ್ಟುಗುಣಗಳಾಗಿ ಮೈಗೂಡಿದ್ದ ಕಾರಣದಿಂದಲೇ ತಾನು ಮುಂದೊಮ್ಮೆ ದೇಶವನ್ನೇ ಆಳುತ್ತೇನೆ ಎಂದು ಪ್ರೌಢಶಾಲಾ ಬಾಲಕನಾಗಿದ್ದಾಗಲೇ ಅನಂತಕುಮಾರ್ ಘೋಷಿಸಲು ಸಾಧ್ಯವಾಯಿತು! ಹೀಗಿರುವಾಗ ವಿದ್ಯಾರ್ಥಿ ಪರಿಷತ್ತಿನ ಹಿರಿಯರಾದ ಶ್ರೀ ಪಿ.ವಿ. ಕೃಷ್ಣಭಟ್ಟ, ಶ್ರೀ ದತ್ತಾತ್ರೇಯ ಹೊಸಬಾಳೆಯಂಥವರ ಮಾರ್ಗದರ್ಶನವು ಅನಂತಕುಮಾರರಿಗೆ ಲಭಿಸಿದ್ದು ಸುದೈವ. ಅಂದಿನ ದಿನಗಳಲ್ಲೇ ಶ್ರೀ ಬಾಬು ಕೃಷ್ಣಮೂರ್ತಿಯವರಂಥ ಮಹನೀಯರ ಕಣ್ಣಿಗೆ ಯುವನಾಯಕ ಅನಂತಕುಮಾರ್ ಭವಿಷ್ಯದ ಪ್ರಧಾನಿಯಾಗಿ ಕಂಡಿದ್ದುದರಲ್ಲಿ ಅತಿಶಯವೇನು?

ದೇಶ ಮೊದಲು, ಪಕ್ಷ ನಂತರ, ವ್ಯಕ್ತಿ ಕೊನೆಗೆ- ಎಂಬ ಸೂತ್ರವನ್ನು ಅನಂತಕುಮಾರ್ ದೃಢವಾಗಿ ಪಾಲಿಸಿಕೊಂಡು ಬಂದವರು. ಹೀಗಾಗಿ ವ್ಯಕ್ತಿಗೆ ಹಿರಿಮೆಪ್ರತಿಷ್ಠೆಗಳನ್ನು ತಂದುಕೊಡುವ ನಾಯಕತ್ವದ ಸ್ಥಾನಮಾನಗಳು ಅವರಿಗೆ ಮಹತ್ವದ್ದೆಂದು ತೋರಲೇ ಇಲ್ಲ. ಪಕ್ಷದ ಸಾಮಾನ್ಯ ಕಾರ್ಯಕರ್ತನಾಗಿದ್ದಾಗಿನಿಂದ ಮೊದಲುಗೊಂಡು ಕೇಂದ್ರಸರ್ಕಾರದ ಮಹತ್ವದ ಹುದ್ದೆಗಳನ್ನು ನಿಭಾಯಿಸುವವರೆಗಿನ ಪ್ರತಿಕ್ಷಣದಲ್ಲೂ ಅನಂತಕುಮಾರ್ ದೇಶ ಮೊದಲು ಎಂಬ ತತ್ವವನ್ನು ವ್ರತದಂತೆ ಪಾಲಿಸಿಕೊಂಡು ಬಂದರು. ಇಂತಹ ಧೋರಣೆಯನ್ನು ತಾಳಿದ್ದುದರಿಂದಲೇ ವ್ಯಕ್ತಿಪ್ರತಿಷ್ಠೆಯಿಂದ ದೂರವಿರುವುದು ಅವರಿಗೆ ಸಾಧ್ಯವಾಯಿತು. ನಾಯಕ-ಕಾರ್ಯಕರ್ತ ಎಂಬ ಭೇದವನ್ನು ಅವರು ಲೆಕ್ಕಿಸಲೇ ಇಲ್ಲ. ಆಗಬೇಕಾದ ಕರ್ತವ್ಯವೇನಿದೆಯೋ ಅದನ್ನು ಮಾಡಿ ಮುಗಿಸಬೇಕು, ಆ ಕೆಲಸ ಕೈಕೆಳಗಿನವರು ಮಾಡಬೇಕಾದ್ದು, ನಾಯಕನ ಯೋಗ್ಯತೆಗೆ ತಕ್ಕುದಲ್ಲ ಎಂಬ ವಿಚಾರ ಅವರ ಮನದಲ್ಲಿ ಎಂದೂ ಸುಳಿಯಲಿಲ್ಲ. ತೇಜಸ್ವಿನಿಯವರು ಮೊದಲ ಬಾರಿಗೆ ಅನಂತಕುಮಾರರನ್ನು ಕಂಡದ್ದು ಕಾಲೇಜು ವಿದ್ಯಾರ್ಥಿದೆಸೆಯಲ್ಲಿದ್ದಾಗ. ಅನಂತಕುಮಾರ್ ವಿದ್ಯಾರ್ಥಿ ಪರಿಷತ್ತಿನ ರಾಜ್ಯ ಕಾರ್ಯದರ್ಶಿಯೆಂದು ತಿಳಿದಾಗ, ತೇಜಸ್ವಿನಿಗೆ ಅಚ್ಚರಿಯೇ ಆಯಿತು. ಅಷ್ಟು ದೊಡ್ಡ ಹುದ್ದೆಯಲ್ಲಿರುವವರು ಸಾಧಾರಣ ಸೈಕಲ್ ಸವಾರರಾಗಿ ತಿರುಗುತ್ತಾರೆಯೇ ಎನಿಸಿತು. ಅಂದಿನ ಮುಖ್ಯ ಭಾಷಣಕಾರರಾಗಿದ್ದ ಅನಂತಕುಮಾರ್, ಕಾರ್ಯಕ್ರಮ ಮುಗಿದ ಮೇಲೆ ಪೊರಕೆ ಹಿಡಿದು ಕಸಗುಡಿಸುತ್ತಿರುವುದನ್ನು ಕಂಡಾಗಲಂತೂ ಬಹು ವಿಚಿತ್ರವೆಂಬಂತೆ ಭಾಸವಾಯಿತು.

ನಾಯಕನಾದವನು ಸ್ವತಃ ಕಾರ್ಯತತ್ಪರನಾಗುವುದರಿಂದ ಇತರ ಕಾರ್ಯಕರ್ತರನ್ನೂ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಬಹುದು, ಅವರಲ್ಲಿ ಉತ್ಸಾಹ ತುಂಬಬಹುದು ಎಂದು ಅನಂತಕುಮಾರ್ ನಂಬಿದ್ದರು. ರಾಜ್ಯಕಾರ್ಯದರ್ಶಿಯ ಸ್ಥಾನದಲ್ಲಿರುವವನು ಎಲ್ಲೋ ಕಸಗುಡಿಸಿ ಸ್ವಚ್ಛಮಾಡುವ ಕೆಲಸಕ್ಕೆ ಮುಂದಾಗಬೇಕೇ ಎನ್ನುವುದು ಅವರಿಗೆ ಪ್ರಶ್ನೆಯಾಗಿಯೇ ತೋರುತ್ತಿರಲಿಲ್ಲ. ಸಹಜವಾಗಿಯೇ ಉಳಿದ ಕಾರ್ಯಕರ್ತರೂ ಅವರೊಡನೆ ಕೈಜೋಡಿಸುತ್ತಿದ್ದುದರಿಂದ ಸಂಘಟನೆಯ ಎಲ್ಲ ಕಾರ್ಯಗಳೂ ಯಶಕಾಣುವುದು ಸಾಧ್ಯವಾಗುತ್ತಿತ್ತು. ನಾಯಕನೆಂದರೆ ಯಶಸ್ಸಿನ ಮೆಟ್ಟಿಲೇರಿ ಮೇಲೆ ನಿಂತು ಉಳಿದವರತ್ತ ಕೈಬೀಸುವುದಲ್ಲ, ಉಳಿದವರನ್ನೂ ಜೊತೆಗೆ ಕರೆದೊಯ್ದು ಸರಿಯಾದ ಪಥದಲ್ಲಿ ಮುನ್ನಡೆಸುವುದೇ ನಾಯಕನ ಆದ್ಯಕರ್ತವ್ಯ ಎಂದು ಅನಂತಕುಮಾರ್ ಹೇಳುತ್ತಿದ್ದರು. ಇದರಿಂದಾಗಿಯೇ ಅಸಂಖ್ಯಕಾರ್ಯಕರ್ತರ ಪ್ರೀತ್ಯಾದರಗಳನ್ನೂ ಅವರು ಗಳಿಸಿಕೊಳ್ಳುವುದು ಸಾಧ್ಯವಾಯಿತು.

ದೇಶದ ಮೂಲೆಮೂಲೆಗಳಲ್ಲಿ ಸಂಚರಿಸುತ್ತಾ ಅಸಂಖ್ಯಾತ ಕಾರ್ಯಕರ್ತರನ್ನು ಭೇಟಿಮಾಡುತ್ತಿದ್ದ ಅನಂತಕುಮಾರ್ ಅವರಲ್ಲಿ ಪ್ರತಿಯೊಬ್ಬರನ್ನೂ ನೆನಪಿಟ್ಟುಕೊಳ್ಳುತ್ತಿದ್ದ ಪರಿ ಅಸದೃಶ. ಪೂರ್ವದಲ್ಲಿ ಭೇಟಿಯಾಗಿದ್ದ ಯಾವುದೋ ಭಾಗದ ಕಾರ್ಯಕರ್ತನು ಮುಂದೆಂದೋ ಕಾಣಸಿಕ್ಕಾಗ ಆತ ತನ್ನ ಪರಿಚಯ ಹೇಳಿಕೊಳ್ಳುವ ಮೊದಲೇ ತಾವೇ ಆತನ ಹೆಸರು ಹೇಳಿ ವಿಚಾರಿಸುತ್ತಿದ್ದ ಪರಿಗೆ ಎಲ್ಲರೂ ಬೆರಗಾಗುತ್ತಿದ್ದರು. ಬರಿಯ ಹೆಸರು ಮಾತ್ರವಲ್ಲ, ಮೊದಲಿಗೆ ಭೇಟಿಯಾಗಿದ್ದ ಆತನ ಕುಟುಂಬದವರನ್ನೋ ಜೊತೆಯಲ್ಲಿ ಚಹಾ ಕುಡಿದುದನ್ನೋ ಇನ್ನ್ಯಾವುದೋ ಪ್ರಸಂಗವನ್ನೋ ಪ್ರಸ್ತಾಪಿಸುತ್ತಿದ್ದರು. ಒರಿಸ್ಸಾದ ಚುನಾವಣೆಯಲ್ಲಿ ಗೆದ್ದ ಪ್ರತಿನಿಧಿಯೊಬ್ಬ ತಮ್ಮನ್ನು ಕಾಣಲು ಬಂದಾಗ, ಅವನಿಗೇ ಮರೆತುಹೋಗಿದ್ದ ಆತನ ಪ್ರತಿಸ್ಪರ್ಧಿಯ ಹೆಸರು ಹೇಳಿ ಸೋತಮೇಲೆ ಅವನೇನು ಮಾಡುತ್ತಿದ್ದಾನೆ ಎಂದು ವಿಚಾರಿಸಿದ್ದರು. ಪಕ್ಷದ ಸಂಘಟನಾಕಾರ್ಯದ ಯಶಸ್ಸಿಗೆ ಅನಂತಕುಮಾರರ ಅಸಾಧಾರಣ ನೆನಪಿನ ಶಕ್ತಿಯ ಕೊಡುಗೆ ವಿಶೇಷವಾಗಿತ್ತೆಂಬುದರಲ್ಲಿ ಸಂಶಯವಿಲ್ಲ. ವಿದ್ಯಾರ್ಥಿ ಪರಿಷತ್ತಿನ ಕಾರ್ಯಕರ್ತನಾಗಿದ್ದ ದಿನಗಳಿಂದಲೇ ಅನಂತಕುಮಾರರಿಗೆ ವಿವಿಧ ಸನ್ನಿವೇಶಗಳಲ್ಲಿ ವರ್ತಿಸಬೇಕಾದ ಬಗೆ, ಪರಿಹಾರ ಕಂಡುಕೊಳ್ಳುವ ತಂತ್ರ, ಯಶಸ್ಸು ಸಾಧಿಸುವ ರೀತಿನೀತಿಗಳ ಬಗೆಗಿನ ಅರಿವು ಸಮಗ್ರವಾಗಿತ್ತು. ಯಾವುದೇ ಸಮಸ್ಯೆಗೆ ಅವರು ತತ್‌ಕ್ಷಣದ ಪರಿಹಾರ ಸೂಚಿಸಬಲ್ಲವರಾಗಿದ್ದರು. ಅದು ಯಶಕಾಣಲಿಲ್ಲವೆಂದಾದರೆ ಬೇರೊಂದು ಮಾರ್ಗೋಪಾಯ ಅವರಲ್ಲಿ ಸಿದ್ಧ. ಮೈಸೂರಿನ ಇಂಜಿನಿಯರಿಂಗ್ ಕಾಲೇಜೊಂದರ ವಿದ್ಯಾರ್ಥಿಗಳು ತಮ್ಮ ಸಮಸ್ಯೆಗಳ ಪರಿಹಾರಕ್ಕೆ ದಾರಿಸೂಚಿಸಬೇಕೆಂದು ಯುವನಾಯಕ ಅನಂತಕುಮಾರರನ್ನು ಕೇಳಿದಾಗ ಅವರು ಧರಣಿ ಸತ್ಯಾಗ್ರಹ ಮಾಡುವಂತೆ ಹೇಳಿಕೊಟ್ಟರು. ಸತ್ಯಾಗ್ರಹ ಹೂಡಿ 2-3 ದಿನಗಳಾದರೂ ಆಡಳಿತ ಮಂಡಳಿ ಸೂಕ್ತವಾಗಿ ಸ್ಪಂದಿಸದಿದ್ದಾಗ, ಅನಂತಕುಮಾರ್ ವಿದ್ಯಾರ್ಥಿಗಳ ಮೂಲಕ ಪ್ರಯೋಗಿಸಿದ ಅಸ್ತ್ರ- ಆಮರಣಾಂತ ಉಪವಾಸ! ಪತ್ರಿಕಾಪ್ರಚಾರವೂ ಬೆಂಬಲಕ್ಕೆ ಸಿಗುತ್ತಿದ್ದಂತೆಯೇ ಆಡಳಿತವರ್ಗ ಎಚ್ಚೆತ್ತು ವಿದ್ಯಾರ್ಥಿಗಳ ಬೇಡಿಕೆ ಈಡೇರಿಸಲು ಕೂಡಲೇ ಮುಂದಾಯಿತು!

ಕಾರ್ಯಕರ್ತರ ಸಮಸ್ಯೆಗೆ ಪರಿಹಾರ ಸೂಚಿಸುವುದು ಮಾತ್ರವಲ್ಲ, ಹಲವು ಸಂದರ್ಭಗಳಲ್ಲಿ ಅದಕ್ಕೆ ಬೇಕಾದ ಕಾರ್ಯತಂತ್ರದ ಅನುಷ್ಠಾನಕ್ಕೂ ಅನಂತಕುಮಾರ್ ಮುಂದಾಗುತ್ತಿದ್ದರು. ಉದಾಹರಣೆಗೆ, ಬಾಗಲಕೋಟೆಯ ಪರಿಷತ್ತಿನ ಕಚೇರಿ ಹಣಕಾಸಿನ ಕೊರತೆಯಿಂದಾಗಿ ಯಾವುದೇ ಕಾರ್ಯಕ್ರಮ ನಡೆಸಲಾಗದ ಸ್ಥಿತಿಯಲ್ಲಿತ್ತು. ಅಲ್ಲಿಗೆ ಭೇಟಿಕೊಟ್ಟ ಅನಂತಕುಮಾರರಿಗೆ ಮರುದಿನ ಊರ ಸಮೀಪದಲ್ಲಿ ದೊಡ್ಡ ಜಾತ್ರೆ ನಡೆಯುವ ಸುದ್ದಿ ತಿಳಿಯಿತು. ಕೂಡಲೇ ಅನಂತಕುಮಾರ್ ಅಲ್ಲಿನ ಕಾರ್ಯಕರ್ತರಿಗೆ ಹಣಸಂಪಾದನೆಯ ಮಾರ್ಗವೊಂದನ್ನು ತೋರಿಸಿಕೊಟ್ಟರು. ಅದೇನೆಂದರೆ, ಜಾತ್ರೆ ನಡೆಯುವಲ್ಲಿ ದೇವಾಲಯದ ಸಮೀಪ ಚಪ್ಪಲಿ ಸ್ಟ್ಯಾಂಡ್ ಇರಿಸಿ ಹಣ ವಸೂಲಿ ಮಾಡುವುದು! ಬರೀ ಸಲಹೆ ಕೊಟ್ಟಿದ್ದು ಮಾತ್ರವಲ್ಲ, ತಾವೂ ಉಳಿದ ಕಾರ್ಯಕರ್ತರ ಜೊತೆಗೆ ಹೋಗಿ ಕಂಡವರ ಪಾದರಕ್ಷೆ ಕಾಯುವ ಕೆಲಸಕ್ಕೂ ಅನಂತಕುಮಾರ್ ಸಿದ್ಧರಾಗಿಯೇಬಿಟ್ಟರು!

(ಮುಂದುವರಿಯುವುದು)



# ನವಚೈತನ್ಯದ 'ಚಿಣ್ಣರ ಚೇತನ'






**ಶ್ರೀ ನಾಗೇಶ ಹೆಗಡೆ**
**ಲೇಖಕರು ಹಾಗೂ ಪತ್ರಕರ್ತರು**

ಜೂನ್ ತಿಂಗಳು ಬಂದಿತೆಂದರೆ ಎಲ್ಲೆಡೆಯೂ ಹೊಸತನ ಕಾಣುತ್ತದೆ. ಶಾಲಾ ಮಕ್ಕಳಿಗೆ ಹೊಸ ತರಗತಿ, ಹೊಸ ಸಮವಸ್ತ್ರ, ಹೊಸ ಪುಸ್ತಕ ದೊರೆಯುತ್ತದೆ. ಶಾಲೆಗಳೆಲ್ಲ ಅಲಂಕರಿಸಿಕೊಂಡು ಮಕ್ಕಳನ್ನು ಹೊಸ ಶೈಕ್ಷಣಿಕ ವರ್ಷಕ್ಕೆ ಸ್ವಾಗತಿಸುತ್ತಿರುವ ಈ ಸಂದರ್ಭದಲ್ಲಿ ನಾವು ಚಿಣ್ಣರ ಚೇತನ ಭಿತ್ತಿ ಪತ್ರಿಕೆಯನ್ನು ಹೊಸ ಬಗೆಯಲ್ಲಿ ಅನಾವರಣ ಮಾಡುತ್ತಿದ್ದೇವೆ.

ಸಮಾಜ ಮತ್ತು ಶಿಕ್ಷಣದ ಮಧ್ಯೆ ಒಂದು ಸೇತುವೆಯಾಗಿ ಅದಮ್ಯ ಚೇತನ ಸಂಸ್ಥೆಯು ಕೆಲಸ ಮಾಡುತ್ತಿದೆ ಎಂಬುದರ ಸಂಕೇತವಾಗಿ ಅದಮ್ಯ ಚೇತನ ಸಂಸ್ಥೆಯ ರೂವಾರಿ ಶ್ರೀಮತಿ ತೇಜಸ್ವಿನಿ ಅನಂತಕುಮಾರರು ಲಂಡನ್ ಸೇತುವೆಯ ಮೇಲೆ ನಿಂತು ಶುಭ ಕೋರಿದ್ದಾರೆ. ಈ ತಿಂಗಳಿನಿಂದ ಸಂಸ್ಥೆಯು "ಚಿಣ್ಣರ ಚೇತನ" ಗೋಡೆ ಪತ್ರಿಕೆಯನ್ನು ನೂರಾರು ಶಾಲೆಗಳಿಗೆ ವಿತರಿಸುವ ಕಾರ್ಯವನ್ನು ಆರಂಭಿಸುತ್ತಿದೆ.

ಪ್ರತಿ ವರ್ಷ ಜೂನ್ 5ರಂದು ವಿಶ್ವ ಪರಿಸರ ದಿನಾಚರಣೆಯನ್ನು ಇಡೀ ಜಗತ್ತು ಆಚರಿಸುತ್ತದೆ. ಜಗತ್ತಿನ ಎಲ್ಲ ದೇಶಗಳ, ಪ್ರಾಂತ್ಯಗಳ, ಸಮಾಜದ ಎಲ್ಲ ವರ್ಗದ ಜನರು ವಿಶ್ವ ಪರಿಸರ ದಿನದ ಆಚರಣೆಯಲ್ಲಿ ಕೈಜೋಡಿಸಬೇಕೆಂಬುದು ವಿಶ್ವಸಂಸ್ಥೆಯ ಆಶಯ. ಇಡೀ ಜಗತ್ತನ್ನು ಮುನ್ನಡೆಸುವ ಜವಾಬ್ದಾರಿಯನ್ನು ಹೊರಬೇಕಾಗಿರುವ ವಿದ್ಯಾರ್ಥಿಗಳಿಗೆ ಪರಿಸರದ ಮಹತ್ವವನ್ನು ತಿಳಿಸಿಕೊಡುವುದು ಇಂದಿನ ಅಗತ್ಯ. ಈ ವರ್ಷವು ವಿಶ್ವ ಪರಿಸರ ದಿನಾಚರಣೆಯು 50 ವರ್ಷಗಳನ್ನು ಪೂರೈಸುತ್ತಿರುವ ಹಿನ್ನೆಲೆಯಲ್ಲಿ ವಿಶ್ವ ಪರಿಸರ ದಿನದ ಮಹತ್ವವನ್ನು ಈ ಗೋಡೆ ಪತ್ರಿಕೆಯ ಮುಖ್ಯ ಲೇಖನವಾಗಿ ಪ್ರಕಟಿಸಿದ್ದೇವೆ. ಈ ವರ್ಷ ಪ್ಲಾಸ್ಟಿಕ್ ಬಳಕೆ ನಿಷೇಧವನ್ನೇ ಪ್ರಧಾನ ಗುರಿಯನ್ನಾಗಿಸಿಕೊಂಡು ಹೆಚ್ಚಿನ ಕೆಲಸ ಮಾಡಬೇಕಿದೆ. ಪ್ರಧಾನ ಮಂತ್ರಿಯವರೇ ಪ್ಲಾಸ್ಟಿಕ್ ತ್ಯಾಜ್ಯವನ್ನು ಆಯುತ್ತಿರುವ ಚಿತ್ರವನ್ನು ಪ್ರಕಟಿಸುವ ಮೂಲಕ ಈ ಸಂದೇಶವನ್ನು ಪರಿಣಾಮಕಾರಿಯಾಗಿ ರವಾನಿಸಲು ಯತ್ನಿಸಲಾಗಿದೆ.

ಮಳೆಗಾಲವನ್ನು ಪ್ರಧಾನ ವಿಷಯವನ್ನಾಗಿಸಿಕೊಂಡು ಚಿಣ್ಣರ ಚೇತನ ಗೋಡೆ ಪತ್ರಿಕೆಯ ಇಂದಿನ ಸಂಚಿಕೆಯು ಪ್ರಕಟವಾಗುತ್ತಿದೆ. ಜೂನ್ ತಿಂಗಳಿನಲ್ಲಿ ಇಡೀ ಜೀವಲೋಕವು ಮಳೆಯನ್ನು ವಿಧವಿಧವಾಗಿ ಸ್ವಾಗತಿಸುತ್ತದೆ. ಮಳೆಗಾಲದಲ್ಲಿ ಹುಟ್ಟಿಕೊಳ್ಳುವ 'ನಿಸರ್ಗದ ಕೊಡೆ' ನಾಯಿಕೊಡೆಯ ಬಗ್ಗೆ ಸ್ವಾರಸ್ಯಕರವಾದ ಮಾಹಿತಿ ಈ ಸಂಚಿಕೆಯಲ್ಲಿದೆ. ಮಳೆಗಾಲದ ಆರಂಭದಲ್ಲಿಯೇ ಆಗಸದಲ್ಲಿ ಮೋಡಗಳು ದಟ್ಟವಾದಾಗ ನವಿಲು ಏಕೆ ನರ್ತಿಸುತ್ತದೆ ಎಂಬ ಬಗ್ಗೆ ವೈಜ್ಞಾನಿಕ ಕಾರಣಗಳನ್ನು ಈ ತಿಂಗಳ ಪತ್ರಿಕೆ ನೀಡುತ್ತದೆ. ಅದೇ ರೀತಿ, ಮನಸ್ಸನ್ನು ಸೂರೆಗೊಳ್ಳುವ ಸುಶ್ರಾವ್ಯವಾದ ಮೇಘಮಲ್ಹಾರ ರಾಗದ ಇತಿಹಾಸ ಕೂಡ ಇಲ್ಲಿದೆ. ಆರೋಗ್ಯದ ಹಿನ್ನೆಲೆಯಲ್ಲಿ ಮೊಳಕೆ ಬರಿಸಿದ ಕಾಳುಗಳ ಸೇವನೆಯ ಮಹತ್ವವನ್ನೂ ಜೂನ್ ತಿಂಗಳ ಪತ್ರಿಕೆ ಒಳಗೊಂಡಿದೆ. ಗೋಡೆ ಪತ್ರಿಕೆಯ ಪ್ರತಿ ಸಂಚಿಕೆಯಲ್ಲಿಯೂ ಒಂದು ರಸಪ್ರಶ್ನೆ ಇರುತ್ತದೆ. 2023ನೇ ಇಸವಿಯನ್ನು ಅಂತಾರಾಷ್ಟ್ರೀಯ ಸಿರಿಧಾನ್ಯಗಳ ವರ್ಷವೆಂದು ವಿಶ್ವಸಂಸ್ಥೆ ಘೋಷಣೆ ಮಾಡಿದೆ. ಈ ರೀತಿಯ ಘೋಷಣೆಗೆ ಭಾರತವು ವಿಶ್ವಸಂಸ್ಥೆಯಲ್ಲಿ ಮಾಡಿದ ಒತ್ತಾಯವೇ ಕಾರಣ. ಜೊತೆಗೆ, ಕರ್ನಾಟಕದ ಕೆಲವು ಉತ್ಸಾಹಿ ಕಾರ್ಯಕರ್ತರೂ ಸಿರಿಧಾನ್ಯಗಳ ಮಹತ್ವವನ್ನು ಭಾರತ ಸರಕಾರಕ್ಕೆ ಮತ್ತು ವಿಶ್ವಸಂಸ್ಥೆಯ ಸದಸ್ಯರಿಗೆ ಮನವರಿಕೆ ಮಾಡಿಕೊಟ್ಟಿದ್ದರು. ಈ ತಿಂಗಳ ರಸಪ್ರಶ್ನೆ ಸಿರಿಧಾನ್ಯಗಳ ಕುರಿತಾಗಿದೆ. ಪ್ರತಿತಿಂಗಳೂ ಪ್ರಕಟವಾಗುವ ಚಿಣ್ಣರ ಚೇತನ ಪತ್ರಿಕೆಯು ಆಯಾತಿಂಗಳ ಮಹತ್ವದ ಬಗ್ಗೆ, ಚರಿತ್ರೆಯ ಬಗ್ಗೆ, ಪರಂಪರೆಯ ಬಗ್ಗೆ ಹಾಗೂ ನಮ್ಮ ದೈನಂದಿನ ಚಟುವಟಿಕೆಗಳಲ್ಲಿರುವ ವಿಶೇಷಗಳ ಬಗ್ಗೆ ಲೇಖನಗಳನ್ನು ಒಳಗೊಂಡಿರುತ್ತದೆ. ಜುಲೈ ೨೨ರಂದು ವಿಶ್ವ 'ಪೈ' ದಿನ ಎಂದು ಆಚರಿಸಲಾಗುತ್ತಿದೆ. ಜುಲೈ ಸಂಚಿಕೆಯಲ್ಲಿ ಪೈ ಎಂಬ ಸ್ಥಿರಾಂಕದ ಮಹತ್ವ, ಇದನ್ನು ಸಾವಿರಾರು ವರ್ಷಗಳ ಹಿಂದೆಯೇ ನಿರೂಪಿಸಿದ್ದ ಆರ್ಯಭಟ ಎಂಬ ಹಿಂದೂ ಪರಂಪರೆಯ ವಿಜ್ಞಾನಿಯ ಬಗ್ಗೆ ಮಾಹಿತಿಗಳಿರುತ್ತವೆ. ಅಗಸ್ಟ್ ೨೦ರಂದು ಆಚರಿಸುವ ಅಕ್ಷಯಶಕ್ತಿ ದಿನದ ಬಗ್ಗೆ ಲೇಖನವನ್ನು ಆ ತಿಂಗಳಿನ ಸಂಚಿಕೆಯಲ್ಲಿ ಪ್ರಕಟಿಸಲಾಗುತ್ತಿದೆ. ಸೆಪ್ಟೆಂಬರ್ ತಿಂಗಳಿನಲ್ಲಿ ಕೃಷ್ಣ ಜನ್ಮಾಷ್ಟಮಿ ಬರುತ್ತದೆ. ಆ ಸಂದರ್ಭದಲ್ಲಿ ತುಳಸಿ ಮತ್ತು ಕೊಳಲಿನ ಮಹತ್ವದ ಬಗ್ಗೆ ಮಾಹಿತಿಯನ್ನು ನಮ್ಮ ಪತ್ರಿಕೆಯ ಮೂಲಕ ಪಡೆಯಬಹುದು. ಅನಂತಕುಮಾರ್ ವಿಧಿವಶರಾಗಿದ್ದ ನವೆಂಬರ್ ತಿಂಗಳಿನಲ್ಲಿ ಅವರಂತೆಯೇ ಸಮಾಜದ ಸ್ವಾಸ್ಥ್ಯಕ್ಕೆ ಬಹೂಪಯೋಗಿಯಾಗಿರುವ ಬೇವಿನ ಸಸ್ಯದ ಬಗ್ಗೆ ಬರೆಯುತ್ತೇವೆ.

ಮಕ್ಕಳ ಶಿಕ್ಷಣಕ್ಕೆ ಕೊಡುವಷ್ಟೇ ಆದ್ಯತೆಯನ್ನು ಅವರ ಆಹಾರಕ್ಕೂ ಕೊಡಬೇಕು. ಕಲಿಯುವ ಮಕ್ಕಳ ಆಹಾರದಲ್ಲಿ ಉತ್ತಮ ಪೋಷಕಾಂಶಗಳಿರಬೇಕು ಎಂಬ ನಿಟ್ಟಿನಲ್ಲಿ ಅದಮ್ಯ ಚೇತನ ಸಂಸ್ಥೆಯು ಕೆಲಸ ಮಾಡುತ್ತಿದೆ. ಭೌತಿಕ ಬೆಳವಣಿಗೆಗೆ ಪೂರಕವಾಗಿ ಬೌದ್ಧಿಕ ಬೆಳವಣಿಗೆ ಕೂಡ ಮಹತ್ವವನ್ನು ಪಡೆದುಕೊಳ್ಳಬೇಕು. ಈ ಘನವಾದ ಉದ್ದೇಶದಿಂದ ಪ್ರಕಟವಾಗುತ್ತಿರುವ ಚಿಣ್ಣರ ಚೇತನ ಗೋಡೆ ಪತ್ರಿಕೆಯು ಶಾಲಾ ಪಠ್ಯಪುಸ್ತಕಗಳಿಗೆ ಪೂರಕವಾದ ಮಾಹಿತಿಯನ್ನು ಕೊಡುತ್ತದೆ. ಲೇಖನಗಳ ವಿಷಯ ಮಕ್ಕಳಿಗೆ ಸುಲಭವಾಗಿ ಅರ್ಥವಾಗಬೇಕು ಎಂಬ ದೃಷ್ಟಿಯಿಂದ ಸರಳವಾದ ಭಾಷೆಯಲ್ಲಿ ಬರೆಯಲಾಗಿದೆ. ಇಲ್ಲಿರುವ ವಿಷಯಗಳ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ಮಕ್ಕಳು ಬಯಸಿದರೆ ಶಿಕ್ಷಕರು ಅವುಗಳನ್ನು ನೀಡಬಹುದು. ಮಕ್ಕಳಿಗೆ ಮಾತ್ರವಲ್ಲ, ಮಕ್ಕಳ ಮೂಲಕ, ಶಿಕ್ಷಕರ ಮೂಲಕ ಪೋಷಕರಿಗೂ ಪತ್ರಿಕೆಯ ವಿಷಯಗಳು ತಲುಪಬೇಕು ಎಂಬುದು ಈ ಗೋಡೆ ಪತ್ರಿಕೆಯ ಇನ್ನೊಂದು ಪ್ರಮುಖ ಉದ್ದೇಶ. ಮಗುವಿನ ಮೂಲಕ ಪಾಲಕರಿಗೆ ಮತ್ತು ಸಮಾಜಕ್ಕೆ ಸಂದೇಶಗಳನ್ನು ರವಾನಿಸುವ ಈ ಪದ್ಧತಿಯನ್ನು ಹಿಮ್ಮುಖ ಶಿಕ್ಷಣ (Reverse Education) ಎನ್ನುತ್ತಾರೆ.

ಈ ರೀತಿಯಾಗಿ ಅದಮ್ಯ ಚೇತನವನ್ನು, ಸಮಾಜವನ್ನು, ಶಿಕ್ಷಕರನ್ನು, ಪಾಲಕರನ್ನು ಮತ್ತು ವಿದ್ಯಾರ್ಥಿಗಳನ್ನು ಪರಸ್ಪರ ಜೋಡಿಸಿಕೊಂಡು ಪರಿಸರವನ್ನು, ವಿಜ್ಞಾನವನ್ನು ಮತ್ತು ಮಕ್ಕಳಿಗೆ ಕಠಿಣ ಎಂದು ಶಿಕ್ಷಕರು ಭಾವಿಸುವ ವಿಷಯಗಳನ್ನು ನಾವು ಪತ್ರಿಕೆಯಲ್ಲಿ ಪ್ರಕಟಿಸುತ್ತೇವೆ. ಈ ವಿಷಯಗಳ ಬಗ್ಗೆ ಹೆಚ್ಚಿನ ಮಾಹಿತಿ ಬೇಕಾದರೆ ಶಿಕ್ಷಕರು ಅದಮ್ಯ ಚೇತನವನ್ನು ಸಂಪರ್ಕಿಸಬಹುದು. ಪತ್ರಿಕೆಯ ಲೇಖನಗಳ ಬಗ್ಗೆ ಶಿಕ್ಷಕರೂ ಸಲಹೆಗಳನ್ನು ನೀಡಬಹುದು. ಮುಂದಿನ ಎಲ್ಲ ಸಂಚಿಕೆಗಳೂ ಕುತೂಹಲವನ್ನು ಹೆಚ್ಚಿಸುವ ರೀತಿಯಲ್ಲಿ ಅನೇಕ ವಿಷಯಗಳನ್ನು ಹೊತ್ತು ಬರಲಿವೆ. ನಮ್ಮೆಲ್ಲರ ಸಾಮೂಹಿಕ ಪ್ರಯತ್ನವಾಗಿರುವ ಈ ಗೋಡೆ ಪತ್ರಿಕೆ ತನ್ನ ಆಶಯಗಳನ್ನು ನೆರವೇರಿಸಲು ಸಮರ್ಥವಾಗಲಿ ಎಂದು ಹಾರೈಸುತ್ತೇನೆ.

# ಸ್ವಾತಂತ್ರ್ಯ "ವೀರ" ಸಾವರ್ಕರ್

ವ್ಯಕ್ತಿ ವಿಶೇಷ ಮಾಲಿಕೆ

ವಿನಾಯಕ ದಾಮೋದರ ಸಾವರ್ಕರ್ ಜನಿಸಿದ್ದು ಮಹಾರಾಷ್ಟ್ರದ ನಾಸಿಕ್ ತಾಲೂಕಿನ ಭಗೂರು ಗ್ರಾಮದಲ್ಲಿ. ಅವರ ಪೂರ್ವಿಕರು ಪಾಲಶೇತ್ ಹತ್ತಿರದ ಸಾವರವಾಡಿಯಲ್ಲಿ ನೆಲೆಸಿದ್ದುದರಿಂದ ಅವರಿಗೆ ಸಾವರ್ಕರ್ ಎಂಬ ಕುಲನಾಮ ಅಂಟಿಕೊಂಡಿತು. ವಿದ್ಯಾವಂತರಾಗಿದ್ದ ತಂದೆ ದಾಮೋದರ ಪಂತರು ಬಾಲಗಂಗಾಧರ ತಿಲಕರ ಭಕ್ತರು. ಎಳವೆಯಲ್ಲಿಯೇ ತಾಯಿ, ರಾಧಾಬಾಯಿಯವರನ್ನು ಕಳೆದುಕೊಂಡ ಸಾವರ್ಕರರಿಗೆ ಸ್ವಾವಲಂಬನೆಯ ಪಾಠವನ್ನು ಪರಿಸರವೇ ಕಲಿಸಿಕೊಟ್ಟಿತು.



ಪುಣೆಯ ಜಗದ್ಹಿತೇಚ್ಛು ಪತ್ರಿಕೆಯಲ್ಲಿ ಪ್ರಕಟವಾದ ಅವರ ಮೊದಲನೇ ಕವಿತೆಯೇ "ಸ್ವದೇಶಿ ಗೀತೆ". ಆಗ ಸಾವರ್ಕರರಿಗೆ ಹನ್ನೆರಡು ವರ್ಷ ವಯಸ್ಸು. ಅದೇ ತರುಣದಲ್ಲಿ ಇವರು ಬರೆದ "ಹಿಂದೂ ಸಂಸ್ಕೃತಿಯ ಶ್ರೇಷ್ಠತೆ" ಎಂಬ ಲೇಖನ ನಾಸಿಕ ವೈಭವ ಪತ್ರಿಕೆಯಲ್ಲಿ ಅಗ್ರಲೇಖನವಾಗಿ ಪ್ರಕಟವಾಯಿತು.

೧೮೯೭ರಲ್ಲಿ ಮಹಾರಾಷ್ಟ್ರದಲ್ಲಿ ಭೀಕರವಾದ ಪ್ಲೇಗ್ ತಾಂಡವವಾಡಲು ತೊಡಗಿತು. ಸರಕಾರವು ಪರಿಹಾರ ನೀಡುವ ಬದಲು ದೌರ್ಜನ್ಯದಲ್ಲಿ ತೊಡಗಿಕೊಂಡಿತು. ಜನರು ದಂಗೆಯೆದ್ದರು. ಪರಿಸ್ಥಿತಿಯನ್ನು ನಿಭಾಯಿಸಲು ಮಾರ್ಷಲ್ ಲಾ ಜಾರಿಗೊಳಿಸಲಾಯಿತು. ಪುಣೆಯಲ್ಲಿ ಪ್ಲೇಗ್ ಕಮಿಷನರ್ ಆಗಿ ಅಧಿಕಾರ ವಹಿಸಿಕೊಂಡ ಜನರಲ್ ರ್‍ಯಾಂಡ್‌ನ ದೌರ್ಜನ್ಯವು ಮಿತಿಮೀರಿದಾಗ ಚಾಪೇಕರ್ ಸಹೋದರರು ರ್‍ಯಾಂಡ್ ಮತ್ತು ಇನ್ನೊಬ್ಬ ಬ್ರಿಟಿಷ್ ಅಧಿಕಾರಿಯನ್ನು ಗುಂಡಿಕ್ಕಿ ಕೊಂದರು. ಅವರಿಬ್ಬರಿಗೂ ಗಲ್ಲು ಶಿಕ್ಷೆ ವಿಧಿಸಲಾಯಿತು. ಇಡೀ ಪ್ರಕರಣವು ಜನಾಂಗದ ಒಂದು ತಲೆಮಾರಿನ ಮೇಲೆ ಅಪಾರ ಪ್ರಭಾವ ಬೀರಿತು. ಸಾವಿರಾರು ಯುವಕರು ಕ್ರಾಂತಿಯ ದೀಕ್ಷೆ ತೊಟ್ಟರು. ಅವರಲ್ಲಿ ಸಾವರ್ಕರರೂ ಒಬ್ಬರು. ಪ್ಲೇಗಿನ ದಾಳಿಗೆ ತಂದೆಯೂ ಬಲಿಯಾದಾಗ ಸಾವರ್ಕರರು ಭಗೂರನ್ನು ಶಾಶ್ವತವಾಗಿ ತೊರೆದು ನಾಸಿಕದಲ್ಲಿ ವಾಸಮಾಡಲು ತೊಡಗಿದರು.

೧೮೯೯ರಲ್ಲಿ ಸಾವರ್ಕರರು ಗೆಳೆಯರೊಂದಿಗೆ ಸೇರಿ ರಾಮಹರಿ ಎಂಬ ಭೂಗತ ಸಂಸ್ಥೆಯನ್ನು ಸ್ಥಾಪಿಸಿದರು. ಇದಕ್ಕೆ ಪೂರಕವಾಗಿ ಮಿತ್ರಮೇಳ ಎಂಬ ಸಂಸ್ಥೆಯನ್ನು ೦೧-೦೧-೧೯೦೦ರಲ್ಲಿ ಸ್ಥಾಪಿಸಿದರು. ನಾಸಿಕ ಮತ್ತು ಭಗೂರಿನ ಸುತ್ತಮುತ್ತ ಮಿತ್ರಮೇಳದ ಅನೇಕ ಶಾಖೆಗಳು ಪ್ರಾರಂಭವಾದವು. ಸ್ವರಾಜ್ಯದ ಗುರಿಯನ್ನಿರಿಸಿಕೊಂಡು ಶಿವಜಯಂತ್ಯುತ್ಸವ ಮತ್ತು ಗಣೇಶೋತ್ಸವಗಳು ಮುಂತಾದ ಅನೇಕ ಕಾರ್ಯಕ್ರಮಗಳು ಪ್ರಾರಂಭವಾದವು. ಆಂಗ್ಲರನ್ನು ಪರೋಕ್ಷವಾಗಿ ಟೀಕಿಸುವ ಪ್ರಭುರಾಯಾಚಿ ಪ್ರಾರ್ಥನಾ ಮತ್ತು ಸಿಂಹಗಡದ ಲಾವಣಿ, ಬಾಜೀಪ್ರಭುವಿನ ಲಾವಣಿ ಮತ್ತು ಅಫಜಲಖಾನನ ವಧೆ ಮುಂತಾದ ಹಲವು ಲಾವಣಿಗಳನ್ನು ಎಳೆಯ ಮಕ್ಕಳಿಂದಲೇ ಆಡಿಸಿ ಹಾಡಿಸಿ ಆಂಗ್ಲರ ಕೆಂಗಣ್ಣಿಗೆ ಬಲಿಯಾದರು. ಬ್ರಿಟಿಷ್ ಸರಕಾರ ಅವರ ಪುಸ್ತಕಗಳನ್ನು ವಶಪಡಿಸಿಕೊಂಡು ಪ್ರದರ್ಶನಗಳನ್ನು ನಿಷೇಧಿಸಿತು.

ಸಾವರ್ಕರರು ಪುಣೆಯ ಫರ್ಗುಸನ್ ಕಾಲೇಜಿಗೆ ಉನ್ನತ ವಿದ್ಯಾಭ್ಯಾಸಕ್ಕೆ ತೆರಳಿದ ನಂತರ ಮಿತ್ರಮೇಳದ ಚಟುವಟಿಕೆಗಳು ಪುಣೆ ನಗರಕ್ಕೂ ವಿಸ್ತರಿಸಿದವು. ಪುಣೆ ನಗರಕ್ಕೆ ವಿದ್ಯಾಭ್ಯಾಸಕ್ಕಾಗಿ ಬಂದ ನೂರಾರು ತರುಣರು ಮಹಾರಾಷ್ಟ್ರದ ವಿವಿಧ ಮೂಲೆಗಳಿಗೆ ಮಿತ್ರಮೇಳದ ಸಂದೇಶಗಳನ್ನು ಕೊಂಡೊಯ್ದರು. ಸಾವರ್ಕರ್ ಮತ್ತು ಅವರ ಮಿತ್ರವೃಂದ ದೇಶಭಕ್ತಿಯನ್ನು ಪ್ರಚೋದಿಸುವ ಹಲವಾರು ಲಾವಣಿಗಳನ್ನು ರಚಿಸಿ ಹಾಡತೊಡಗಿದರು. ಸಾವರ್ಕರರ ಖಚಿತ ನಿಲುವಿನ ಲೇಖನಗಳು ಅನೇಕ ಪತ್ರಿಕೆಗಳಲ್ಲಿ ಪ್ರಕಟವಾದವು. ಇಷ್ಟೆಲ್ಲ ನಡೆಯುವಾಗ ಅವರ ವಯಸ್ಸು ಇನ್ನೂ ಇಪ್ಪತ್ತು ದಾಟಿರಲಿಲ್ಲ. ೧೯೦೪ರಲ್ಲಿ ಮಿತ್ರಮೇಳವು ಅಭಿನವ ಭಾರತ ಎಂದು ಹೊಸ ಹೆಸರು ಪಡೆಯಿತು. ೧೯೦೫ರಲ್ಲಿ ವಂಗಭಂಗ ಚಳವಳಿ ಪ್ರಾರಂಭವಾಯಿತು. ವಿದೇಶೀವಸ್ತುಗಳ ಬಹಿಷ್ಕಾರವು ಚಳುವಳಿಯ ಪ್ರಮುಖ ಭಾಗವಾಗಿತ್ತು. ಸಾವರ್ಕರರು, ಬಹಿಷ್ಕರಿಸಿದರೆ ಸಾಲದು, ದಹನ ಮಾಡುವ ಮೂಲಕ ಆಕ್ರೋಶವನ್ನು ತೀವ್ರವಾಗಿ ವ್ಯಕ್ತಪಡಿಸಬೇಕು ಎಂದು ಕರೆ ನೀಡಿದರು. ತಿಲಕರೂ ಈ ಕರೆಯನ್ನು ಬೆಂಬಲಿಸಿದರು. ಮೊತ್ತಮೊದಲ ದಹನಕ್ರಿಯೆ ಪುಣೆಯಲ್ಲಿ ತಿಲಕರ ನೇತೃತ್ವದಲ್ಲಿಯೇ ನಡೆಯಿತು. ದಕ್ಷಿಣ ಆಫ್ರಿಕಾದಲ್ಲಿದ್ದ ಗಾಂಧೀಜಿ ಇದನ್ನು ಅನುಮೋದಿಸಿರಲಿಲ್ಲ. (ಇದೇ ಮಾದರಿಯನ್ನು ಮುಂದೆ ಗಾಂಧೀಜಿಯವರು ಕೂಡ ಅನುಸರಿಸಿದರು!)

ವಿದೇಶೀ ವಸ್ತುಗಳ ದಹನ ಚಳುವಳಿಯು ಇತರ ನಗರಗಳಿಗೂ ಹಬ್ಬಿದಾಗ ಬ್ರಿಟಿಷ್ ಸರಕಾರವು ಕಾಲೇಜಿನ ಮೇಲೆ ಒತ್ತಡ ಹೇರಿ ಸಾವರ್ಕರರಿಗೆ ಹತ್ತು ರೂಪಾಯಿಗಳ ದಂಡ ಮತ್ತು ಕಾಲೇಜಿನಿಂದ ಹಾಗೂ ವಸತಿಗೃಹದಿಂದ ಉಚ್ಚಾಟನೆಯ ಶಿಕ್ಷೆಯನ್ನು ನೀಡಿತು. ಫರ್ಗುಸನ್ ಕಾಲೇಜಿನಿಂದ ಬಿಎ ಪದವಿ ಪಡೆದು ಸಾವರ್ಕರರು ಮುಂಬಯಿ ಸೇರಿದರು. ಅಲ್ಲಿಯೂ ಅಭಿನವ ಭಾರತದ ಚಟುವಟಿಕೆಗಳು ಬಿರುಸಿನಿಂದ ನಡೆಯತೊಡಗಿದವು. ಸಂಪೂರ್ಣ ಸ್ವರಾಜ್ಯವನ್ನು ಗಳಿಸಲು ಕ್ರಾಂತಿಯಿಂದ ಮಾತ್ರ ಸಾಧ್ಯ ಎಂಬ ಸಿದ್ಧಾಂತವನ್ನು ಹೊಂದಿದ್ದ ಅಭಿನವ ಭಾರತದ ಗುಪ್ತ ಸಭೆಗಳ ಮೇಲೆ ಸರಕಾರದ ಕಾವಲುಗಣ್ಣು ಸದಾ ಜಾಗೃತವಾಗಿತ್ತು. ಇದೇ ಸಮಯದಲ್ಲಿ ಪಂಡಿತ್ ಶ್ಯಾಮಜಿ ಕೃಷ್ಣ ಶರ್ಮರು ಕೊಡಮಾಡಿದ ಶಿವಾಜಿ ವಿದ್ಯಾರ್ಥಿ ವೇತನವನ್ನು ಗಳಿಸಿದ ಸಾವರ್ಕರ್ ಹೆಚ್ಚಿನ ಓದಿಗಾಗಿ ಲಂಡನ್ನಿಗೆ ತೆರಳಿದರು. ಹಾಗೆ ತೆರಳುವ ಮುನ್ನ ತಾನೆಂದೂ ಪರಕೀಯರ ಚಾಕರಿ ಮಾಡುವುದಿಲ್ಲ ಎಂದು ಮಾಡಿದ ಶಪಥವನ್ನು ಜೀವನ ಪರ್ಯಂತ ಪಾಲಿಸಿದರು.

ಸಾವರ್ಕರರು ಲಂಡನ್ನಿಗೆ ಪ್ರಯಾಣಿಸುತ್ತಿದ್ದ ಹಡಗಿನಲ್ಲಿಯೇ ಅಭಿನವ ಭಾರತದ ಶಾಖೆಯನ್ನು ಪ್ರಾರಂಭಿಸಿದರು. ಲಂಡನ್ನಿನಲ್ಲಿ ಇಂಡಿಯಾ ಹೌಸ್ ಅವರ ನಿವಾಸವಾಯಿತು. ಸಾವರ್ಕರರ ಆಗಮನದ ಜೊತೆಜೊತೆಗೇ ಅವರ ಗುಣಗಾನ ಮಾಡುವ ವರದಿಯೂ ರಹಸ್ಯವಾಗಿ ರವಾನೆಯಾಗಿತ್ತು. ಇದನ್ನು ಲೆಕ್ಕಿಸದ ಸಾವರ್ಕರ್ ಯುವಕರಲ್ಲಿ ಸ್ವಾತಂತ್ರ್ಯದ ಕಿಚ್ಚು ಹಚ್ಚಲು ಇಟಲಿಯ ಮ್ಯಾಝಿನಿಯ ಜೀವನ ಚರಿತ್ರೆಯನ್ನು ಮರಾಠಿ ಭಾಷೆಯಲ್ಲಿ ಬರೆದರು. ಈ ಪುಸ್ತಕ ಪ್ರಕಟವಾದ ಎರಡೇ ತಿಂಗಳಲ್ಲಿ ಎರಡು ಸಾವಿರ ಪ್ರತಿಗಳು ಮಾರಾಟವಾಗಿದ್ದವು. ಈ ಪುಸ್ತಕವನ್ನು ಆಂಗ್ಲ ಸರಕಾರ ನಿಷೇಧಿಸಿ ಪ್ರತಿಗಳನ್ನು ಮುಟ್ಟುಗೋಲು ಹಾಕಿತು. ಸಿಪಾಯಿ ದಂಗೆ ಎಂದು ಕರೆಯಲಾಗುತ್ತಿದ್ದ ೧೮೫೭ರ ಹೋರಾಟದ ವಿವರಗಳನ್ನು ಬ್ರಿಟಿಷ್ ಮೂಲಗಳಿಂದಲೇ ಸಂಗ್ರಹಿಸಿ "೧೮೫೭ರ ಭಾರತದ ಸ್ವಾತಂತ್ರ್ಯ ಸಂಗ್ರಾಮ" ಎಂಬ ಪುಸ್ತಕ ಬರೆದರು. ಬ್ರಿಟಿಷ್ ಸರಕಾರ ಈ ಪುಸ್ತಕವನ್ನೂ ನಿಷೇಧಿಸಿತು. ಹೀಗಿದ್ದರೂ ಅನೇಕ ಬಾರಿ ಮರುಮುದ್ರಣ ಕಂಡ ಈ ಪುಸ್ತಕದ ಮೂರನೆಯ ಆವೃತ್ತಿಯನ್ನು ಭಗತ್ ಸಿಂಗ್ ಮತ್ತು ಚಂದ್ರಶೇಖರ ಆಜಾದ್ ಪ್ರಕಟಿಸಿದ್ದರು.

ಇತ್ತ ಇಂಡಿಯಾ ಹೌಸ್ ಕ್ರಾಂತಿಕಾರಿಗಳ ಕೇಂದ್ರವಾಗಿ ಮಾರ್ಪಟ್ಟಿತು. ವಿವಿಧ ರೀತಿಯಲ್ಲಿ ಪ್ರಚಾರ ಕಾರ್ಯದ ಜೊತೆ ಬಾಂಬ್ ತಯಾರಿಯ ತರಬೇತಿ ಕೂಡ ಈ ಕೇಂದ್ರದಿಂದ ನಡೆಯಿತು. ಇದೇ ಸಂದರ್ಭದಲ್ಲಿ ಫ್ರೀ ಇಂಡಿಯಾ ಸೊಸೈಟಿ ಎಂಬ ಸಂಸ್ಥೆಯನ್ನೂ ಸಾವರ್ಕರ್ ಪ್ರಾರಂಭಿಸಿದರು. ೧೯೦೬ರ ನವೆಂಬರ್ ತಿಂಗಳಿನಲ್ಲಿ ಲಂಡನ್ ನಗರಕ್ಕೆ ಆಗಮಿಸಿದ ಗಾಂಧೀಜಿ ಇಂಡಿಯಾ ಹೌಸ್ ನಡೆಸುತ್ತಿದ್ದ ಭಾನುವಾರದ ಸಭೆಗಳಲ್ಲಿ ಭಾಗವಹಿಸುತ್ತಿದ್ದರು. ಆದರೆ ಅವರ ಸೌಮ್ಯವಾದಿ ಮಾತುಗಳನ್ನು ಕೇಳಲು ಯಾರೂ ಸಿದ್ಧರಿರುತ್ತಿರಲಿಲ್ಲ. ಲಾಲಾ ಹರದಯಾಳ, ಸೇನಾಪತಿ ಬಾಪಟ್, ಗ್ಯಾನ್ ಚಂದ್ ವರ್ಮಾ, ವೀರೇಂದ್ರನಾಥ ಚಟ್ಟೋಪಾಧ್ಯಾಯ, ವಿ ವಿ ಎಸ್ ಅಯ್ಯರ್, ಸುಖಸಾಗರ ದತ್ತ, ಸಿಕಂದರ್ ಹಯಾತ್ ಖಾನ್, ಮಣಿಲಾಲ್, ಮದನ್ ಲಾಲ್ ಧಿಂಗ್ರಾ ಮುಂತಾದ ಮಹಾಮಹಿಮರು ಲಂಡನ್ನಿನ ಅಭಿನವ ಭಾರತ ಶಾಖೆಯ ಸದಸ್ಯರಾದರು.


ಲಂಡನ್ನಿನಲ್ಲಿ ಮದನ್ ಲಾಲ್ ಧಿಂಗ್ರಾ ಬ್ರಿಟಿಷ್ ಸೈನ್ಯಾಧಿಕಾರಿಯನ್ನು ಬಾಂಬಿನಿಂದ ಉಡಾಯಿಸಿದರು. ಇತ್ತ ಭಾರತದಲ್ಲಿ ಸಹೋದರ ಗಣೇಶ ಸಾವರ್ಕರ್ ಸಶಸ್ತ್ರ ಕ್ರಾಂತಿಯ ಸಿದ್ಧತೆ ನಡೆಸಿದ್ದರು. ಈ ಎಲ್ಲ ಬೆಳವಣಿಗೆಗಳ ಹಿಂದೆ ಸಾವರ್ಕರ್ ಕೈವಾಡವಿದೆಯೆಂದು ತಿಳಿದ ಬ್ರಿಟಿಷ್ ಸರಕಾರ ಅವರನ್ನು ಬಂಧಿಸಿ ಭಾರತಕ್ಕೆ ಕರೆದೊಯ್ಯುತ್ತಿದ್ದಾಗ ಫ್ರಾನ್ಸ್ ದೇಶ್ ಮಾರ್ಸೇಲ್ಸ್ ನಗರದ ಸಮೀಪ ತಾವಿದ್ದ ಹಡಗಿನ ಶೌಚಾಲಯದ ಗವಾಕ್ಷಿಯ ಮೂಲಕ ಸಮುದ್ರಕ್ಕೆ ಜಿಗಿದು, ಈಜಿ ಮಾರ್ಸೇಲ್ಸ್ ನಗರದ ಗಡಿಯನ್ನು ತಲುಪಿದರು. ದುರದೃಷ್ಟವಶಾತ್ ಅಲ್ಲಿಯೂ ಬ್ರಿಟಿಷ್ ಪೋಲೀಸರು ಅವರನ್ನು ಅಕ್ರಮವಾಗಿ ಬಂಧಿಸಿ ಭಾರತಕ್ಕೆ ಕರೆತಂದು ವಿಚಾರಣೆ ನಡೆಸಿ ೨೫ ವರ್ಷಗಳ ಎರಡು ಅವಧಿಯ ಕರಿನೀರಿನ ಶಿಕ್ಷೆ ಮತ್ತು ಆಸ್ತಿಪಾಸ್ತಿಗಳ ಜಪ್ತಿ ಶಿಕ್ಷೆ ವಿಧಿಸಿದರು. ಆಗ ಸಾವರ್ಕರರಿಗೆ ಕೇವಲ ೨೮ ವರ್ಷದ ಪ್ರಾಯ!


ಪುಟ 7 ರಲ್ಲಿ ಮುಂದುವರೆದಿದೆ

## ವಜ್ರಾಸನ (Thunderbolt Posture)

# ಸರಳ ಯೋಗಾಭ್ಯಾಸ

**ಎಸ್. ರಾಘವೇಂದ್ರ ಪ್ರಸಾದ್**
ಅಧ್ಯಕ್ಷರು - ಸಹಬಾಳ್ವೆ





**ವಜ್ರಾಸನ ಧ್ಯಾನಮಾಡಲು ಒಂದು ಒಳ್ಳೆಯ ಭಂಗಿ. ಈ ಆಸನ ಸರಳವಾದ ಕುಳಿತುಕೊಳ್ಳುವ ಯೋಗಾಸನವಾಗಿದೆ. ಇದರ ಹೆಸರು ಸಂಸ್ಕೃತ ಪದ ವಜ್ರದಿಂದ ಬಂದಿದೆ, ಅಂದರೆ ಸಿಡಿಲು.**

**ಆಸನ ಮಾಡುವ ರೀತಿ**

1) ಮೊಟ್ಟಮೊದಲು ಕಾಲುಗಳನ್ನು ವಿಸ್ತಾರವಾಗಿ ಹಾಗೂ ನೇರವಾಗಿ ಚಾಚಿ ಕುಳಿತುಕೊಳ್ಳಿ ಹಾಗೂ ಕೈಗಳು ದೇಹದ ಬದಿಯಲ್ಲಿ ಬರಲಿ ಮತ್ತು ಹಸ್ತಗಳನ್ನು ಕೆಳಮುಖ ಮಾಡಿ ಇಟ್ಟುಕೊಳ್ಳಿ. 2) ಎರಡೂ ಕಾಲುಗಳನ್ನು ಮಂಡಿಯ ತನಕ ಬಾಗಿಸಿ ಮತ್ತು ಪಾದಗಳನ್ನು ಪೃಷ್ಠದ ಕೆಳಗೆ ಇಟ್ಟುಕೊಳ್ಳಿ. 3) ತದನಂತರ ಎರಡು ಪಾದಗಳ ದೊಡ್ಡ ಬೆರಳು ಒಂದಕ್ಕೊಂದು ತಾಗುವಂತೆ ಇಟ್ಟುಕೊಳ್ಳಿ. 4) ಕೈಗಳನ್ನು ಮಂಡಿಯ ಮೇಲೆ ಸಾಮಾನ್ಯವಾಗಿ ಅಥವಾ ಒಂದು ಮುದ್ರೆಯಲ್ಲಿ ಇಟ್ಟುಕೊಳ್ಳಿ. 5) ನಿಮ್ಮ ಬೆನ್ನು, ಕುತ್ತಿಗೆ ಮತ್ತು ನೋಟ ನೇರವಾಗಿರಲಿ 6) ಸ್ವಲ್ಪಹೊತ್ತು ಈ ಭಂಗಿಯಲ್ಲಿ ಸಾಧಾರಣ ಉಸಿರಾಟದಲ್ಲಿ ಶಾಂತಿಯಿಂದ ಕುಳಿತು ತದನಂತರ ಸಮಸ್ಥಿತಿಗೆ ಬನ್ನಿ.

**ಆಸನದ ಪ್ರಯೋಜನಗಳು**

1) ಈ ಆಸನದಿಂದ ತೊಡೆ ಮತ್ತು ಕಾಲಿನ ಸ್ನಾಯುಗಳ ಶಕ್ತಿ ಹೆಚ್ಚುತ್ತದೆ. 2) ಜೀರ್ಣ ಕ್ರಿಯೆಗೆ ಉತ್ತಮ ಆಸನ. 3) ಬೆನ್ನುಮೂಳೆಯನ್ನು ನೇರವಾಗಿ ಇರಿಸಲು ಮತ್ತು ನೋವನ್ನು ಶಮನ ಮಾಡಲು ಸಹಾಯಕವಾಗಿರುತ್ತದೆ. 4) ಮನಸ್ಸನ್ನು ಶಾಂತವಾಗಿ ಮತ್ತು ಸ್ಥಿರವಾಗಿಡಲು ಸಹಾಯ ಮಾಡುತ್ತದೆ. 5) ಮಲಬದ್ಧತೆಯನ್ನು ನಿವಾರಿಸುವುದರಲ್ಲಿ ಈ ಆಸನ ಸಹಾಯಕವಾಗುತ್ತದೆ.

**ಎಚ್ಚರಿಕೆ ವಹಿಸಬೇಕಾದವರು**

1) ಪೈಲ್ಸ್ ತೊಂದರೆ ಇರುವವರು, ತೀವ್ರ ಮೊಣಕಾಲು ಸಮಸ್ಯೆ ಇದ್ದವರು ಈ ಆಸನವನ್ನು ಮಾಡಬಾರದು. 2) ಇತ್ತೀಚಿಗೆ ಶಸ್ತ್ರ ಚಿಕಿತ್ಸೆಗೆ ಒಳಗಾದವರು, ಗರ್ಭಿಣಿಯರು ವೈದ್ಯರ ಅನುಮತಿ/ ಸಲಹೆ ಪಡೆಯಬೇಕು.

## ಟ್ವಿಟರ್ ಕಲರವ

ಈ ಗಿಡ ಜೂನ್ 5, 2015 ರಂದು ಲಾಲ್ ಬಾಗ್ ಪಶ್ಚಿಮ ದ್ವಾರದ ಬಳಿ ಶ್ರೀ. ಅನಂತಕುಮಾರ್ ಅವರು ನೆಟ್ಟಿದ್ದು. ಯಾಕೋ ಮುದುರಿ ಹೋಗಿದೆ. ಲಾಲ್ ಬಾಗ್ ಅಧಿಕಾರಿಗಳಿಗೆ ವಿಷಯ ತಿಳಿಸಿದ್ದೇವೆ.

ಶ್ರೀ ಅನಂತಕುಮಾರರ ಅನುಪಸ್ಥಿತಿಯಲ್ಲಿ ಈ ಗಿಡವನ್ನು ಉಳಿಸುವ ಜವಾಬ್ದಾರಿ ನಮ್ಮದು, ಎಂಬುದು ನನ್ನ ಭಾವನೆ.

**-ತೇಜಸ್ವಿನಿ ಅನಂತಕುಮಾರ್**



ಪುಟ 6 ರಿಂದ

## ಸ್ವಾತಂತ್ರ್ಯ "ವೀರ" ಸಾವರ್ಕರ್

೧೯೧೧ ರಿಂದ ಸಾವರ್ಕರರ ಸೆಲ್ಯುಲರ್ ಜೈಲು ಶಿಕ್ಷೆ ಆರಂಭವಾಯಿತು. ಕಠಿಣ ಶಿಕ್ಷೆಯ ನಡುವೆಯೂ ಜೈಲಿನ ಸುಧಾರಣೆಗಾಗಿ ಹೋರಾಟವನ್ನು ನಡೆಸಿದರು. ಆಗ ಅವರನ್ನು ಹಲವು ವರ್ಷಗಳ ಕಾಲ ಏಕಾಂತ ಬಂಧನದಲ್ಲಿರಿಸಲಾಯಿತು. ೧೯೨೧ರಲ್ಲಿ ಅವರನ್ನು ರತ್ನಗಿರಿ ಜಿಲ್ಲೆಯ ಜೈಲಿಗೆ ರವಾನಿಸಲಾಯಿತು. ನಂತರ ಬಿಡುಗಡೆಯಾದರೂ ಜಿಲ್ಲೆಯಿಂದ ಹೊರಗೆ ಹೋಗದಂತೆ ನಿರ್ಬಂಧಿಸಲಾಯಿತು. ೧೯೩೭ರಲ್ಲಿ ಈ ನಿರ್ಬಂಧಗಳನ್ನು ಸಡಿಲಿಸಿದಾಗ ರಾಜಕೀಯ ಚಟುವಟಿಕೆಗಳಿಗೆ ಮರಳಿದ ಸಾವರ್ಕರ್ ಹಿಂದೂ ಮಹಾಸಭಾದ ಅಧ್ಯಕ್ಷರಾದರು. ಹಿಂದುತ್ವ ಎಂಬ ಪರಿಕಲ್ಪನೆಯನ್ನು ಪರಿಚಯಿಸಿದರು. ದೇಶ ವಿಭಜನೆಯನ್ನು ವಿರೋಧಿಸಿದರು.

೧೯೪೮ರಲ್ಲಿ ಗಾಂಧಿ ಹತ್ಯೆಯಾದಾಗ ಸಾವರ್ಕರರನ್ನು ಬಂಧಿಸಲಾಯಿತು. ಆದರೆ ಅವರ ವಿರುದ್ಧ ಯಾವುದೇ ಆರೋಪ ಸಾಬೀತಾಗದೆ ಬಿಡುಗಡೆಯಾದರೂ ಭಾರತ ಸರಕಾರ ಅವರ ಚಟುವಟಿಕೆಗಳ ಮೇಲೆ ಸದಾ ಒಂದು ಕಣ್ಣಿಟ್ಟಿತ್ತು. ೧೯೬೬ರ ಫೆಬ್ರವರಿ ೧ರಿಂದ ಆಹಾರ ತ್ಯಾಗ ಮಾಡಿದ ಸಾವರ್ಕರ್ ಅದೇ ತಿಂಗಳ ೨೬ರಂದು ದೇಹತ್ಯಾಗ ಮಾಡಿದರು. ಹಿಂದುತ್ವದ ಪ್ರಬಲ ಪ್ರತಿಪಾದಕರಾಗಿದ್ದ ಸಾವರ್ಕರ್ ಮೂಢನಂಬಿಕೆಗಳನ್ನು ವಿರೋಧಿಸುತ್ತಿದ್ದರು. ಸಾವನ್ನೂ ತನ್ನಷ್ಟದಂತೆಯೇ ಆಹ್ವಾನಿಸಿಕೊಂಡ ವೀರ ಸಾವರ್ಕರ್, ತಮ್ಮ ಅಂತ್ಯಕ್ರಿಯೆಯ ಧಾರ್ಮಿಕ ವಿಧಿಗಳಿಗೆ ಅನುಮತಿ ನಿರಾಕರಿಸಿದ್ದರು. ಸ್ವತಂತ್ರ ಭಾರತದಲ್ಲಿಯೂ ಆಳುಗರ ಕಾವಲುಗಣ್ಣಿಗೆ ಬಲಿಯಾದ ಇಬ್ಬರು ಹೋರಾಟಗಾರರಲ್ಲಿ ಒಬ್ಬರಾಗಿದ್ದರು, ಸಾವರ್ಕರ್. ಇನ್ನೊಬ್ಬರು; ಸುಭಾಶ್ ಚಂದ್ರ ಬೋಸ್!





ಸಸ್ಯಲೋಕ ಪರಿಚಯ ಮಾಲಿಕೆ- 21

# ಸೀಮೆ ಅಗಸೆ



ಸೆನ್ನಾ ಅಲಾಟಾ ಎಂಬ ಸಸ್ಯಶಾಸ್ತ್ರೀಯ ಹೆಸರಿನ ಔಷಧೀಯ ಗಿಡವನ್ನು ಕ್ಯಾಂಡಲ್ ಸ್ಟಿಕ್ ಅಥವಾ ಮೇಣದ ಬತ್ತಿ ಗಿಡ ಎಂತಲೂ ಕರೆಯುತ್ತಾರೆ. ಮೆಕ್ಸಿಕೊ ಮತ್ತು ವೆಸ್ಟ್ ಇಂಡೀಸ್‌ನಿಂದ ಪೆರಾಗ್ವೆ ವರೆಗಿನ ಉಷ್ಣವಲಯದ ಪ್ರದೇಶದಲ್ಲಿ ಸ್ಥಳೀಯವಾಗಿ ಬೆಳೆಯುವ ಈ ಸಸ್ಯವು ಭಾರತ, ಅಮೆರಿಕಾ, ಆಗ್ನೇಯ ಏಷಿಯಾ, ಉತ್ತರ ಆಸ್ಟ್ರೇಲಿಯಾ ಮತ್ತು ಆಫ್ರಿಕಾ ದೇಶದ ಕೆಲವು ಭಾಗಗಳಲ್ಲಿ ವ್ಯಾಪಕವಾಗಿ ಬೆಳೆಯುತ್ತದೆ. ಇದನ್ನು ಆಲಂಕಾರಿಕ ಸಸ್ಯವಾಗಿಯೂ ಬಳಸುತ್ತಾರೆ. ಉತ್ತಮ ಔಷಧೀಯ ಮೌಲ್ಯಗಳನ್ನೂ ಈ ಸಸ್ಯಗಳು ಹೊಂದಿವೆ. ಸೀಮೆ ಅಗಸೆಯು ಒಂದು ರೀತಿಯ ಪೊದೆಸಸ್ಯವಾಗಿದ್ದು 3 ರಿಂದ 4 ಮೀಟರ್ (9.8 ರಿಂದ 13.1 ಅಡಿ) ಎತ್ತರ ಬೆಳೆಯುತ್ತದೆ. ಎಲೆಗಳು 50 ರಿಂದ 80 ಸೆಂಟಿಮೀಟರ್ (20 ರಿಂದ 31 ಇಂಚು) ಉದ್ದವಿರುತ್ತವೆ.

ಎಲೆಗಳು ಮುಟ್ಟಿದರೆ ಮುನಿ ಸಸ್ಯದಂತೆ ಕತ್ತಲೆಯಲ್ಲಿ ಮುಚ್ಚಿಕೊಳ್ಳುತ್ತವೆ. ಹೂಗೊಂಚಲು ಹಳದಿ ಮೇಣದಬತ್ತಿಯಂತೆ ಸುಂದರವಾಗಿ ಕಾಣುವುದರಿಂದ ಕ್ಯಾಂಡಲ್ ಸ್ಟಿಕ್ ಎಂಬ ಅನ್ವರ್ಥ ಹೆಸರನ್ನೂ ಇದು ಪಡೆದುಕೊಂಡಿದೆ. ನೇರವಾದ ಕೋಡಿನಂತಹ ಕಾಯಿ 25 ಸೆಂ.ಮೀ ಉದ್ದವಿರುತ್ತದೆ. ಇದರ ಬೀಜಗಳು ನೀರಿನ ಮೂಲಕ ಅಥವಾ ಪ್ರಾಣಿಗಳಿಂದ ಮತ್ತು ಸಿಡಿಯುವಿಕೆಯಿಂದ ಪ್ರಸಾರವಾಗುತ್ತವೆ. ಕೋಡುಗಳ ಎರಡೂ ಬದಿಗಳಲ್ಲಿ ರೆಕ್ಕೆಯಂತಹ ರಚನೆಗಳಿವೆ. ಬೀಜದಿಂದ ಸುಲಭವಾಗಿ ಬೆಳೆಸಬಹುದಾದ ಈ ಸೀಮೆ ಅಗಸೆ ಅಪಾರವಾದ ಔಷಧೀಯ ಗುಣಗಳನ್ನು ಹೊಂದಿದೆ. ಶ್ರೀಲಂಕಾ, ಮಲೇಶಿಯಾ ಮತ್ತು ಥೈಲ್ಯಾಂಡ್ ದೇಶಗಳಲ್ಲಿ ಔಷಧಿಗಳ ಪ್ರಮುಖ ಘಟಕವಾಗಿ ಪುರಾತನ ಕಾಲದಿಂದಲೂ ಬಳಕೆಯಾಗುತ್ತಿದೆ.

*ಗಜಕರ್ಣ, ಕಜ್ಜಿ ಮತ್ತು ಚರ್ಮದ ಇತರ ಶಿಲೀಂಧ್ರಗಳ ಸೋಂಕುಗಳ ಚಿಕಿತ್ಸೆಯಲ್ಲಿ ಇದು ಅತ್ಯಂತ ಪರಿಣಾಮಕಾರಿ. ಒಂದು ರೀತಿಯ ಹಸಿರು ಹತ್ತಿ ಉಣ್ಣೆಯನ್ನು ಪಡೆಯಲು ಎಲೆಗಳನ್ನು ಗಾರೆಯಲ್ಲಿ ಪುಡಿಮಾಡಲಾಗುತ್ತದೆ. ಇದನ್ನು ಅದೇ ಪ್ರಮಾಣದ ಸಸ್ಯಜನ್ಯ ಎಣ್ಣೆಯೊಂದಿಗೆ ಬೆರೆಸಿ ಪೀಡಿತ ಪ್ರದೇಶದ ಮೇಲೆ ದಿನಕ್ಕೆ ಎರಡು ಅಥವಾ ಮೂರು ಬಾರಿ ಉಜ್ಜಲಾಗುತ್ತದೆ. *ಇದರಲ್ಲಿರುವ ಆಂಥ್ರಾಕ್ವಿನೋನ್ ಅಂಶವು ವಿರೇಚಕವಾಗಿ ಕೆಲಸ ಮಾಡುತ್ತದೆ. *ಹೊಟ್ಟೆಯಲ್ಲಿರುವ ಜಂತುಗಳ ನಿವಾರಣೆಗೆ, ವಿಷಹಾರಕವಾಗಿ, ಅಸ್ತಮಾ, ರಕ್ತದ ಏರೊತ್ತಡ, ಸಿಕಲ್ ಸೆಲ್ ಅನೀಮಿಯಾ, ಮಧುಮೇಹ, ಸಂಧಿವಾತ ಮುಂತಾದ ಅನೇಕ ಕಾಯಿಲೆಗಳ ಚಿಕಿತ್ಸೆಗಳಲ್ಲಿ ಬಳಸುತ್ತಾರೆ.



**ಇತರ ಉಪಯೋಗಗಳು:** ಜಾಸ್ತಿ ನೀರನ್ನೂ ಹೆಚ್ಚಿನ ಉಪಚಾರವನ್ನೂ ಅಪೇಕ್ಷಿಸದ ಈ ಸಸ್ಯವು ತಾನೇ ತಾನಾಗಿ ತೋಟದಲ್ಲಿ, ಬೇಲಿಗಳ ಮೇಲೆ ಪಸರಿಸುತ್ತದೆ. ಸಹಜವಾಗಿ ಬೆಳೆಯುವ ಈ ಗಿಡವನ್ನು ಅಲಂಕಾರಕ್ಕಾಗಿ ಬೆಳೆಸಬಹುದು. ಈ ಗಿಡದ ಎಳೆಯ ಕೊಂಬೆಗಳನ್ನು ಹಾಗೂ ಎಲೆಗಳನ್ನು ಹಸಿರೆಲೆ ಗೊಬ್ಬರಕ್ಕಾಗಿ ರೈತರು ಬಳಸುತ್ತಾರೆ.

● ಛಾಯಾ ಓಕ್ ಬಾಪಟ್

## ಹಸಿರು ಭಾನುವಾರ - ತಿಂಗಳ ಅಂಕಿಅಂಶ

| ಹಸಿರು ಭಾನುವಾರದ ಸಂಖ್ಯೆ | ಸ್ಥಳ | ಭಾಗವಹಿಸಿದವರು | ನೆಡಲಾದ ಗಿಡಗಳ ಸಂಖ್ಯೆ/ ಚಟುವಟಿಕೆಗಳು |
|---|---|---|---|
| **386** 21/05/23 | ಬಸವನಗುಡಿಯ ಬಿ.ಪಿ. ವಾಡಿಯಾ ರಸ್ತೆಯಲ್ಲಿರುವ ಅನಂತವನ | ಗ್ಲೋಬಲ್ ಕಾಲೇಜಿನಿಂದ 10 , ಬಿ ಎಂ ಎಸ್, ಕಾಲೇಜನಿಂದ ವಿದ್ಯಾರ್ಥಿಗಳು ಹಾಗೂ ಅದಮ್ಯ ಚೇತನದ ಕಾರ್ಯಕರ್ತರು ಸೇರಿ 20ಕ್ಕೂ ಹೆಚ್ಚು ಜನ ಭಾಗಿಯಾಗಿದ್ದರು. | 10 ಹೊಂಗೆ ಗಿಡಗಳನ್ನು ನೆಡಲಾಯಿತು. ಜೊತೆಗೆ ಈ ಹಿಂದೆ ನೆಟ್ಟ ಗಿಡಗಳಿಗೆ ನೀರುಣಿಸುವುದು ಮತ್ತು ಗಿಡದ ಬುಡದ ಸುತ್ತಮುತ್ತ ಸ್ವಚ್ಛಗೊಳಿಸಲಾಯಿತು. |
| **387** 28/05/23 | ಬೆಂಗಳೂರು ವಿಶ್ವವಿದ್ಯಾಲಯದ ಎನ್ ಜಿ ಇ ಎಫ್ ಆವರಣ | ಗ್ಲೋಬಲ್ ಕಾಲೇಜು, ಬಿಎಂಎಸ್ ಕಾಲೇಜು, ಎಂಎಲ್ಎ ಕಾಲೇಜು, ನೃಪತುಂಗ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು, ಕಳಿಂಗ ಇಂಡಸ್ ಟೆಕ್, ಯೂಥ್ ಫಾರ್ ಸೇವಾ, ಹಾಗೂ ಸಂಸ್ಥೆಯ ಸ್ವಯಂ ಸೇವಕರು ಸೇರಿದಂತೆ ಹಲವರು ಭಾಗವಹಿಸಿದ್ದರು. | 10 ನೇರಳೆ ಗಿಡಗಳನ್ನು ನೆಡಲಾಯಿತು. ಅದಮ್ಯ ಚೇತನದಲ್ಲಿ ತೊಳೆದ ಅಕ್ಕಿ ನೀರನ್ನು ಗಿಡಗಳಿಗೆ ಹಾಕಲಾಯಿತು. |
| **388** 04/06/23 | ಬೆಂಗಳೂರು ವಿವಿಯ ಎನ್‌ಎಸ್‌ಎಸ್ ಭವನದ ಹಿಂಭಾಗದ ಬಿಯು ಬಯೋ-ಪಾರ್ಕಿನಲ್ಲಿ ಆಯೋಜನೆ ಮಾಡಲಾಗಿತ್ತು | ಈ ಹಸಿರು ಕಾರ್ಯಕ್ಕೆ ಗ್ಲೋಬಲ್ ಕಾಲೇಜು, ಬಿಎಂಎಸ್ ಕಾಲೇಜು, ನೃಪತುಂಗ ಯೂನಿರ್ವಸಿಟಿ, ಕಳಿಂಗ ಇಂಡಸ್ ಟೆಕ್, ಯೂಥ್ ಫಾರ್ ಸೇವಾ, ಯುವಿಸಿಇ ಮತ್ತು ಅದಮ್ಯ ಚೇತನ ಕಾರ್ಯಕರ್ತರು ಸೇರಿ ಒಟ್ಟು 260 ಜನ ಭಾಗಿಯಾಗಿದ್ದರು. | 25 ನೇರಳೆ, 25 ಬೆಟ್ಟದ ನೆಲ್ಲಿಕಾಯಿ, 20 ಬಾದಾಮಿ, 10 ಹಲಸು ಹಾಗೂ 10 ಪನ್ನೇರಳೆ ಗಿಡಗಳನ್ನು ನೆಡಲಾಯಿತು. |
| **389** 11/06/23 | ಎಸ್. ಎಮ್. ಎಸ್. ಲೇಔಟ್, ಜೆ.ಪಿ. ನಗರ ರಸ್ತೆಯ ಬದಿಯಲ್ಲಿ ಗಿಡಗಳನ್ನು ನೆಡುವ ಮೂಲಕ ಆಚರಿಸಲಾಯಿತು. | ಬಿ ಎಂ ಎಸ್ ಇಂಜಿನಿಯರಿಂಗ್, ಬಿ ಎಂ ಎಸ್ ಆರ್ಕಿಟೆಕ್ಟ್ ಕಾಲೇಜು, ಯೂಥ್ ಫಾರ್ ಸೇವಾ ಮತ್ತು ಸ್ವಯಂ ಸೇವಕರು ಪಾಲ್ಗೊಂಡಿದ್ದರು. | 5 ಹೊಂಗೆ, 8 ಕಾಡು ಬಾದಾಮಿ, 2 ಬೇವಿನ ಗಿಡ, 5 ಮಾವು, 10 ಟಬಿಬಿಯಾ ಸೇರಿ ಒಟ್ಟು 45 ಗಿಡಗಳನ್ನು ನೆಡಲಾಯಿತು. |

ಅನಂತಪಥ

Editorial Advisory Committee: **Tejaswini Ananthkumar / Gopal T.S / K. Janardhana Thunga**
Layout: **Ananthakumar Pratishthana** Assistance: **Sanjay R / Trivikram Joshi / Madhumathi Kumbaluru**
Inputs: **Poornaprajna / Srikanth K / Veena Vittal**
Photographs: **Gopal TS / Chakrapani Kengeri / Internet Sources / AKP / ACF**
Acknowledgements: **Raghavendra Prasad / G M Inamdar / Chaya Bapat**
Sketch: **Raghupathi Sringeri** Printed at: **Rashtrothana Mudranalaya, Chamrajpet, Bengaluru**
Published by: **Tejaswini Ananthkumar**

For-AnanthKumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 I Email: ananth.path@akp.org.in

ಸ್ಪಷ್ಟನೆ: ಆನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು:ಈ ಪತ್ರ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
**ಸೂಚನೆ:** ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ
To get a e-version of this periodical SMS your name and place to 8884182415

# ಚಾಟ್ ಜಿಪಿಟಿ ಬಳಸಿಕೊಂಡ ಉತ್ಪನ್ನಗಳು

ನಿಮಗೆ ಈಗಾಗಲೇ ತಿಳಿದಿರುವಂತೆ ಚಾಟ್‌ಜಿಪಿಟಿಯು ಓಪನ್‌ಎಐ ಸಂಸ್ಥೆ ಅಭಿವೃದ್ಧಿ ಪಡಿಸಿರುವ ಭಾಷಾ ಮಾದರಿ ತಂತ್ರಜ್ಞಾನ. ನೀವು ನೀಡುವ ಸೂಚನೆಗಳಿಗನುಸಾರವಾಗಿ ಮನುಷ್ಯರು ನೀಡುವಂತೆಯೇ ಪ್ರತಿಕ್ರಿಯೆಗಳನ್ನು ನೀಡುವ ಈ ತಂತ್ರಜ್ಞಾನಕ್ಕೆ ಅಂತರ್ಜಾಲದಲ್ಲಿ ಈಗಾಗಲೇ ಲಭ್ಯವಿರುವ ಅಪಾರವಾದ ಮಾಹಿತಿ ಕಣಜವನ್ನು ಬಳಸಿಕೊಳ್ಳುವ ತರಬೇತಿಯಿರುತ್ತದೆ. ಇದು ಚುಟುಕಿ ಹೊಡೆಯುವಷ್ಟರಲ್ಲಿ ನಿಮ್ಮ ಸೂಚನೆಗಳನ್ನು ಅರ್ಥಮಾಡಿಕೊಂಡು ಅನೇಕ ಭಾಷೆಗಳಲ್ಲಿ ಪ್ರತಿಕ್ರಿಯೆ ನೀಡುವ ಸಾಮರ್ಥ್ಯ ಮತ್ತು ಕೌಶಲ್ಯಗಳನ್ನು ಹೊಂದಿದೆ. ನಿಮಗೆ ಅಗತ್ಯ ಬಿದ್ದಾಗ ಸಹಾಯಕ್ಕೆ ಧಾವಿಸುವ ಮೇಧಾವಿ ಸ್ನೇಹಿತನಂತೆ ಇದು ಕೆಲಸ ಮಾಡುತ್ತದೆ.

ಏಂಡ್ರ್ಯೂ ಎನ್‌ಜಿ ಎಂಬ ಅಮೆರಿಕಾದ ಪ್ರಸಿದ್ಧ ಕಂಪ್ಯೂಟರ್ ವಿಜ್ಞಾನಿ ಚಾಟ್‌ಜಿಪಿಟಿಯು ಆಧುನಿಕ ಕಾಲದ ಹೊಸ ವಿದ್ಯುಚ್ಛಕ್ತಿ ಎಂದು ವರ್ಣಿಸಿದ್ದಾರೆ. ಕಾರಣವಿಷ್ಟೇ, ವಿದ್ಯುಚ್ಛಕ್ತಿ ಎಲ್ಲ ಕಡೆ ಲಭ್ಯವಿರುವಂತೆ ಚಾಟ್‌ಜಿಪಿಟಿ ಕೂಡ ಎಲ್ಲಕಡೆ ಲಭ್ಯವಿರುತ್ತದೆ. ಇಂದು ಅನೇಕ ಸಂಸ್ಥೆಗಳು ಇದೇ ಮಾದರಿಯ ತಮ್ಮದೇ ಆದ ಕೃತಕ ಬುದ್ಧಿಮತ್ತೆಯ ಮಾದರಿಗಳನ್ನು, ಪರಿಚಯಿಸುತ್ತಿವೆ. ಅನೇಕ ಕಂಪೆನಿಗಳು ವಿದ್ಯುಚ್ಛಕ್ತಿಯನ್ನು ಬಳಸಿಕೊಳ್ಳುವ ವಿವಿಧ ಉತ್ಪನ್ನಗಳನ್ನು ತಯಾರಿಸುತ್ತಿರುವಂತೆಯೇ ಚಾಟ್‌ಜಿಪಿಟಿ ಮುಂತಾದ ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನವನ್ನು ಬಳಸಿಕೊಳ್ಳುವ ಅನೇಕ ಸರಕುಗಳು ಮಾರುಕಟ್ಟೆಗೆ ಬರಲಿವೆ. ವಿದ್ಯುತ್ತು, ಉಗಿಶಕ್ತಿ,ಗಳಂತೆಯೇ ತಂತ್ರಜ್ಞಾನದ ಸರಕುಗಳಿಗೆ ಮೂಲದ್ರವ್ಯವಾಗಿರುವ ಭಾಷಾ ಮಾದರಿಗಳನ್ನು ಪೇಟೆಂಟ್ ಮಾಡುವುದು ಸಾಧ್ಯವಿಲ್ಲ. ಜಗತ್ತಿನಲ್ಲಿ ಅನೇಕ ವಿದ್ಯುತ್ ಉತ್ಪಾದಕ ಸ್ಥಾವರಗಳಿವೆ. ಆದರೆ ಯಾವ ಕಂಪೆನಿಯೂ ತಾವು ತಯಾರಿಸುವ ವಿದ್ಯುತ್ತೇ ಸರ್ವಶ್ರೇಷ್ಠ ಎಂದು ಹೇಳಿಕೊಳ್ಳುವಂತಿಲ್ಲ. ಅದೇ ರೀತಿ, ಕಾಲಕ್ರಮೇಣ ಎಲ್ಲ ಭಾಷಾ ಮಾದರಿ ತಂತ್ರಜ್ಞಾನಗಳೂ ಒಂದೇ ಮಟ್ಟದ ಕ್ಷಮತೆಯಿಂದ ಕೆಲಸ ಮಾಡುತ್ತವೆ. ಆದರೆ ಈ ಭಾಷಾ ಮಾದರಿ ತಂತ್ರಜ್ಞಾನಗಳನ್ನು ಬಳಸಿಕೊಳ್ಳುವ ಸರಕುಗಳ ಕ್ಷಮತೆಯಲ್ಲಿ ವ್ಯತ್ಯಾಸವಿರಬಹುದು. ಯಾವ ಸಮಸ್ಯೆಗಳನ್ನು ಪರಿಹರಿಸಲು ಯಾವ ಸರಕುಗಳನ್ನು ನೀಡಲಾಗುತ್ತದೆ ಮತ್ತು ಅವು ಯಾವ ಮಟ್ಟದ ಅನುಭವಗಳನ್ನು ನೀಡುತ್ತವೆ ಎಂಬುದೇ ಮುಖ್ಯವಾಗುತ್ತದೆ.

ಚಾಟ್‌ಜಿಪಿಟಿಯನ್ನು ಬಳಸಿಕೊಂಡು ನಿಮ್ಮ ಸರಕುಗಳನ್ನು ಉತ್ಪಾದಿಸಲು ಚಾಟ್‌ಜಿಪಿಟಿಯ ಸಂರಚನೆಯ ಬಗ್ಗೆ ತಿಳಿದುಕೊಳ್ಳುವ ಅವಶ್ಯಕತೆ ನಿಮಗಿಲ್ಲ. ನಿಮ್ಮ ಸುತ್ತಮುತ್ತ ಇರುವ ಸಮಸ್ಯೆಗಳನ್ನು ಗಮನಿಸಿ. ಈ ಸಮಸ್ಯೆಗಳನ್ನು ಬಗೆಹರಿಸಲು ಅದನ್ನು ಒಂದು ಉಪಕರಣದಂತೆ ಬಳಸಿಕೊಳ್ಳುವುದು ಹೇಗೆ ಎಂದು ತಿಳಿದುಕೊಳ್ಳಿ.

ಉದಾಹರಣೆಗೆ ಮೈಕ್ರೋಸಾಫ್ಟ್ ಕಂಪೆನಿಯು ತನ್ನ 'ಬಿಂಗ್' ಸರ್ಚ್ ಇಂಜಿನ್‌ಗೆ ಚಾಟ್‌ಜಿಪಿಟಿಯನ್ನುಸಂಯೋಜನೆಗೊಳಿಸಿದೆ. ಅಂದರೆ ಚಾಟ್‌ಜಿಪಿಟಿಯ ತಳಹದಿಯ ಮೇಲೆ ಬಿಂಗ್ ಸರ್ಚ್ ಇಂಜಿನ್ನನ್ನು ನಿರೂಪಿಸಿದೆ. ಚಾಟ್‌ಜಿಪಿಟಿಯನ್ನು ನೇರವಾಗಿ ಬಳಸಿದರೆ ಅದು ನಿಮಗೆ ೨೦೨೧ಕ್ಕಿಂತ ಹಿಂದಿನ ಮಾಹಿತಿಗಳನ್ನು ಬಳಸಿಕೊಂಡ ಮಾದರಿಗಳನ್ನು ನೀಡುತ್ತದೆ. ಆದರೆ ಅದನ್ನು ತಳಹದಿಯಾಗಿ ಬಳಸಿಕೊಂಡಿರುವ ಬಿಂಗ್ ತೀರ ಇತ್ತೀಚಿನ ಮಾಹಿತಿಗಳನ್ನೂ ಸಂಗ್ರಹಿಸಿ ಬಳಸಿಕೊಳ್ಳುವುದರಿಂದ ಬಳಕೆದಾರರಿಗೆ ಹೆಚ್ಚು ಉಪಯುಕ್ತವಾಗಿದೆ. ಗೂಗಲ್ ಬಳಸುವ ಬಾರ್ಡ್ (BARD) ಮತ್ತು ಚಾಟ್‌ಜಿಪಿಟಿಗಳಲ್ಲಿ ಅಂತಹ ವ್ಯತ್ಯಾಸವಿಲ್ಲ. ಗೂಗಲ್ ನಿಮಗೆ ಮಾಹಿತಿಯನ್ನು ಸಂಗ್ರಹಿಸಿ ಮೊತ್ತವಾಗಿ ನೀಡಿದರೆ ಚಾಟ್‌ಜಿಪಿಟಿ ತತ್‌ಕ್ಷಣದಲ್ಲಿ ಸಂಭಾಷಣೆಯ ರೀತಿಯಲ್ಲಿ ಮಾಹಿತಿಗಳನ್ನು ನೀಡಲು ಪ್ರಾರಂಭಿಸುತ್ತದೆ.

ಉದಾಹರಣೆಗೆ ಕರ್ನಾಟಕದ ಪ್ರಮುಖ ತಿಂಡಿಗಳನ್ನು ಗೂಗಲ್ ಮತ್ತು ಚಾಟ್‌ಜಿಪಿಟಿ ಎರಡೂ ಪಟ್ಟಿ ಮಾಡಿಕೊಡುತ್ತವೆ. ಆದರೆ ಉತ್ತರ ಭಾರತೀಯನೊಬ್ಬನಿಗೆ ಬಿಸಿಬೇಳೆಬಾತ್ ಪರಿಚಯಿಸುವುದು. ಹೇಗೆ ಎಂದರೆ ಚಾಟ್‌ಜಿಪಿಟಿ ಮಾತ್ರ ಉತ್ತರಿಸುತ್ತದೆ. ದ್ಯುತಿ ಸಂಶ್ಲೇಷಣೆಯ ಬಗ್ಗೆ ಹತ್ತು ಸಾಲುಗಳ ಪ್ರಬಂಧವನ್ನು ಬರೆದುಕೊಡು ಎಂದರೆ ಚಾಟ್‌ಜಿಪಿಟಿ ಬರೆದುಕೊಡುತ್ತದೆ. ಇನ್ನೂ ಕೆಲವು ನಿಖರ ಸೂಚನೆಗಳನ್ನು ನೀಡುವ ಮೂಲಕ, ಅಂದರೆ, ಕರ್ನಾಟಕದ ಐದನೆಯ ತರಗತಿಯ ಹುಡುಗರಿಗೆ, ವಿನೋದಮಯವಾದ ಸರಳ ಭಾಷೆಯಲ್ಲಿ ಹತ್ತು ಸಾಲುಗಳಿಗೆ ಸೀಮಿತವಾಗಿ, ಕನ್ನಡದಲ್ಲಿ ಎಂಬ ಸೂಚನೆ ನೀಡಿದರೆ ಎಲ್ಲ ಸೂಚನೆಗಳನ್ನೂ ಚಾಚೂ ತಪ್ಪದೆ ಚಾಟ್‌ಜಿಪಿಟಿ ಪಾಲಿಸುತ್ತದೆ. ಅಂದರೆ, ನಿಮಗೆ ಬೇಕಾದಂತೆ ವಿಷಯ ಮತ್ತು ಸಂದರ್ಭಗಳನ್ನು ಸೂಚಿಸಿ ಸಹಾಯ ಪಡೆಯಬಹುದು.

11th Nation First Dialogues

ಇಂದಿನ ಸಾಂಪ್ರದಾಯಿಕ ಶಿಕ್ಷಣ ಪದ್ಧತಿಯನ್ನು ಅಲುಗಾಡಿಸುವ ಸಾಮರ್ಥ್ಯವನ್ನು ಚಾಟ್‌ಜಿಪಿಟಿ ಹೊಂದಿದೆ. ವಿದ್ಯಾರ್ಥಿಗಳು ತಮಗೆ ಬೇಕಾದಂತೆ ಶಿಕ್ಷಣವನ್ನು ಪಡೆಯುವ ಮುಕ್ತ ಅವಕಾಶವನ್ನು ಇದು ಒದಗಿಸುತ್ತದೆ. ವಿದ್ಯಾರ್ಥಿಗಳು ತಮ್ಮದೇ ಭಾಷೆಯಲ್ಲಿ ಸಂಭಾಷಣೆಯ ಮೂಲಕ ಜ್ಞಾನವನ್ನು



**ಶ್ರೀ ಪ್ರತ್ಯೂಷ್ ಓಕ್**
**ತಂತ್ರಜ್ಞಾನ ಪರಿಣತರು, ಮೈಕ್ರೋಸಾಫ್ಟ್**

ಪಡೆದುಕೊಳ್ಳುವುದರ ಜೊತೆಗೆ ತಮ್ಮ ಕೆಲಸದ ಬಗ್ಗೆ ತತ್‌ಕ್ಷಣದ ಪ್ರತಿಕ್ರಿಯೆಯನ್ನೂ ಪಡೆಯಬಹುದು. ಚಾಟ್‌ಜಿಪಿಟಿಯಲ್ಲಿ ಕನ್ನಡ ಮತ್ತು ಹಿಂದಿ ಭಾಷೆಗಳ ಸೌಲಭ್ಯ ಈಗಾಗಲೇ ದೊರೆಯುತ್ತಿದೆ. ಇದನ್ನು ಕ್ಯಾಂಪಸ್ಸುಗಳಿಂದ ದೂರವಿಡುವುದು ಸಾಧ್ಯವಿಲ್ಲ. ಹೀಗಾಗಿ, ವಿದ್ಯಾರ್ಥಿಗಳು ಚಾಟ್‌ಜಿಪಿಟಿಯನ್ನು ಬಳಸಿಕೊಳ್ಳುವಾಗ ಸಾಂಪ್ರದಾಯಿಕ ಶಿಕ್ಷಣ ಪದ್ಧತಿಗಳೂ ಬದಲಾಗಬೇಕಾಗುತ್ತವೆ. ಆದರೆ, ಚಾಟ್‌ಜಿಪಿಟಿ ಒದಗಿಸುವ ಸುಳ್ಳು ಮಾಹಿತಿ ಮತ್ತು ದ್ವೇಷಭರಿತ ಸಂದೇಶಗಳ ಹಿನ್ನೆಲೆಯಲ್ಲಿ ಅದನ್ನು ಜವಾಬ್ದಾರಿಯುತವಾಗಿ ಹಾಗೂ ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಬಗ್ಗೆ ವಿದ್ಯಾರ್ಥಿಗಳಿಗೆ ತಿಳುವಳಿಕೆ ನೀಡಬೇಕು

ಚಾಟ್‌ಜಿಪಿಟಿಯನ್ನು ಈಗಾಗಲೇ ಪರಿಣಾಮಕಾರಿಯಾಗಿ ಬಳಸಿಕೊಳ್ಳಲಾಗುತ್ತಿದೆ. ಸಂವಹನವೇ ಪ್ರಮುಖವಾಗಿರುವ ಬ್ಯಾಂಕಿಂಗ್, ಆರೋಗ್ಯ ಸೇವೆ ಮತ್ತು ಇ-ಕಾಮರ್ಸ್ ಮುಂತಾದ ಕ್ಷೇತ್ರಗಳಲ್ಲಿ ಇದು ಬಹಳ ಸಹಕಾರಿಯಾಗಿದೆ. ಚಾಟ್‌ಬಾಟ್ ಹಾಗೂ ವರ್ಚುವಲ್ ಸಹಾಯಕಗಳು ತಮ್ಮ ವೈಶಿಷ್ಟ್ಯಗಳನ್ನು ಹೆಚ್ಚಿಸಿಕೊಳ್ಳಲು ಚಾಟ್‌ಜಿಪಿಟಿಯನ್ನು ಬಳಸಿಕೊಳ್ಳುತ್ತಿವೆ. ಕಿಸಾನ್ ಸಾಥಿ ಎಂಬ ಚಾಟ್‌ಬಾಟ್ ರೈತರಿಗೆ ಬೆಳೆ, ಹವಾಮಾನ, ಮಾರುಕಟ್ಟೆ ಬೆಲೆ ಮುಂತಾದವುಗಳ ಬಗ್ಗೆ ಮಾಹಿತಿ ನೀಡಲು ಚಾಟ್‌ಜಿಪಿಟಿಯನ್ನು ಬಳಸಿಕೊಳ್ಳುತ್ತಿದೆ. ಅದೇ ರೀತಿ, ಕೃಷಿ ಜಾಗರಣ್ ಇದನ್ನು ಬಳಸಿಕೊಂಡು ರೈತರಿಗೆ ಸರಕಾರದ ಯೋಜನೆಗಳು ಮತ್ತು ಕೃಷಿ ಸಾಲದ ಬಗ್ಗೆ ಮಾಹಿತಿಗಳನ್ನು ನೀಡುತ್ತಿದೆ. ಕೋಟಕ್ ಮಹೀಂದ್ರ ಬ್ಯಾಂಕ್ ತನ್ನ ವರ್ಚುವಲ್ ಸಹಾಯಕ 'ಕೆಯಾ'ದಲ್ಲಿ ಚಾಟ್‌ಜಿಪಿಟಿ ಬಳಸಿಕೊಂಡು ತನ್ನ ಗ್ರಾಹಕರಿಗೆ ನಿಖರವಾದ ಪ್ರತಿಕ್ರಿಯೆಗಳನ್ನು ನೀಡಲು ಯಶಸ್ವಿಯಾಗಿದೆ. ಇತ್ತೀಚೆಗೆ ಪಂಜಾಬ್ ಮತ್ತು ಹರಿಯಾಣ ಉಚ್ಚನ್ಯಾಯಾಲಯವು ಅತ್ಯಂತ ಕ್ರೌರ್ಯದಿಂದ ಕೂಡಿದ ಕೊಲೆ ಮೊಕದ್ದಮೆಗಳಲ್ಲಿ ಜಾಮೀನು ನೀಡಿಕೆಗೆ ಸಂಬಂಧಿಸಿದಂತೆ ಜಾಗತಿಕ ಅಭಿಪ್ರಾಯಗಳನ್ನು ತಿಳಿದುಕೊಳ್ಳಲು ಚಾಟ್‌ಜಿಪಿಟಿ ಬಳಸಿಕೊಂಡದ್ದು ಗಮನಾರ್ಹ.

ಚಾಟ್‌ಜಿಪಿಟಿ ಮತ್ತು ಇತರ ಬೃಹತ್ ಕಲಿಕಾ ಮಾದರಿಗಳು (LLM) ಅತ್ಯಂತ ವೇಗವಾಗಿ ಬೆಳೆಯುತ್ತಿದ್ದು ಈಗಾಗಲೇ ಅನೇಕ ಕ್ಷೇತ್ರಗಳು ತಮ್ಮ ಉತ್ಪನ್ನಗಳಿಗೆ ಸಂಯೋಜಿಸಿಕೊಂಡಿವೆ. ಇವು ಶಿಕ್ಷಣ ಕ್ಷೇತ್ರವನ್ನೂ ಒಳಗೊಂಡಂತೆ ಯಾವುದೇ ಜ್ಞಾನಕ್ಷೇತ್ರಗಳ ಮೇಲೆ ಪರಿಣಾಮ ಬೀರುತ್ತವೆ. ಆದುದರಿಂದ ಇವುಗಳನ್ನು ಒಂದು ಉಪಕರಣದಂತೆ ಬಳಸಿಕೊಳ್ಳಲು ಕಲಿಯಬೇಕು. ಇವತ್ತಲ್ಲ ನಾಳೆ ಇವೆಲ್ಲವೂ ಸರಕುಗಳಂತೆ ಬಳಕೆಯಾಗುವುದು ನಿಶ್ಚಿತ. ಆದುದರಿಂದ ಇವುಗಳನ್ನು ಬಳಸಿಕೊಂಡು ನಮ್ಮ ಮತ್ತು ಸುತ್ತಮುತ್ತ ಇರುವ ಜನರ ಸಮಸ್ಯೆಗಳನ್ನು ಪರಿಹರಿಸಲು ಚಾಟ್‌ಜಿಪಿಟಿಯನ್ನು ಹೇಗೆ ಬಳಸಬಹುದು ಎಂದು ಚಿಂತಿಸಬೇಕು. ಚಾಟ್‌ಜಿಪಿಟಿ ಮಾತ್ರವಲ್ಲ, ಇತರ ಎಲ್ಲ ಬೃಹತ್ ಕಲಿಕಾ ಮಾದರಿಗಳನ್ನು ಬಳಸಿ ಪರೀಕ್ಷಿಸಬೇಕು.



# ಅದಮ್ಯ ಚೇತನ ತಿಂಗಳ ವರದಿ (15 ಮೇ 2023 ರಿಂದ 15 ಜೂನ್ 2023)

**ಎಲ್ಲ ಕಾಲಕ್ಕೂ ಪ್ರಸ್ತುತವಾಗುವ ಬಸವಣ್ಣನವರ ವಿಚಾರಧಾರೆ**

ಎಲ್ಲರನ್ನೂ ಒಳಗೊಳ್ಳುವ ಬಸವಣ್ಣನವರ ತತ್ತ್ವಗಳು ಎಲ್ಲ ಕಾಲಕ್ಕೂ ಪ್ರಸ್ತುತ, ಅವರು ಇಡೀ ವಿಶ್ವಕ್ಕೆ ಸಮಾನತೆಯ ಸಂದೇಶ ನೀಡಿದ ಮಹನೀಯರು ಎಂದು ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ, ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ತಿಳಿಸಿದರು. ಅವರು ತಮ್ಮ ಲಂಡನ್ ನಗರದ ಭೇಟಿಯ ಸಂದರ್ಭದಲ್ಲಿ ಲ್ಯಾಂಬೆತ್‌ನಲ್ಲಿ ಸ್ಥಾಪಿತವಾಗಿರುವ ಬಸವಣ್ಣನವರ ಪುತ್ಥಳಿಗೆ ಮಾಲಾರ್ಪಣೆ ಮಾಡುತ್ತ ಪ್ರತಿಮೆಯ ಸ್ಥಾಪನೆಯ ಕಾರ್ಯದಲ್ಲಿ ಅನಂತಕುಮಾರರ ಪಾತ್ರವನ್ನು ಸ್ಮರಿಸಿಕೊಂಡರು.

ಈ ಸಂದರ್ಭದಲ್ಲಿ ಲ್ಯಾಂಬೆತ್ ಬಸವೇಶ್ವರ ಫೌಂಡೇಶನ್ ಅಧ್ಯಕ್ಷ ಹಾಗೂ ಲ್ಯಾಂಬೆತ್ ಮಾಜೀ ಮೇಯರ್ ಡಾ. ನೀರಜ್ ಪಾಟೀಲ್, ಕುಮಾರಿ ವಿಜೇತಾ ಅನಂತಕುಮಾರ್ ಮತ್ತು ಲಂಡನ್ ನಗರದ ಅನೇಕ ಕನ್ನಡಿಗರು ಉಪಸ್ಥಿತರಿದ್ದರು.

**ಹೊಸ ವಿಷಯ, ಹೊಸ ಬಣ್ಣದೊಂದಿಗೆ ಚಿಣ್ಣರ ಚೇತನ**

ಚಿಣ್ಣರ ಚೇತನ ಗೋಡೆ ಪತ್ರಿಕೆಯು ಮಕ್ಕಳ ವಿದ್ಯಾಭ್ಯಾಸಕ್ಕೆ ಪೂರಕವಾಗಲಿದೆ ಎಂದು ವಿದ್ಯಾಭಾರತಿಯ ಪ್ರಮುಖರಾದ ಶ್ರೀ ಜಿ ಆರ್ ಜಗದೀಶ್ ಹೇಳಿದರು.

ಪತ್ರಿಕೆಯ ಬಿಡುಗಡೆ ಸಂದರ್ಭದಲ್ಲಿ ಮಾತನಾಡಿದ ಅವರು ನೋಡುವುದರಿಂದ, ಮಾಡುವುದರಿಂದ, ಓದುವುದರಿಂದ, ಕೇಳುವುದರಿಂದ ಕಲಿಯುವಿಕೆ ನಡೆಯುತ್ತದೆ, ಚಿಣ್ಣರ ಚೇತನವನ್ನು ಓದುವ ಮತ್ತು ನೋಡುವ ಮೂಲಕ ಮಕ್ಕಳಲ್ಲಿ ಬೇರೆ ಬೇರೆ ವಿಷಯಗಳ ಬಗ್ಗೆ ಕುತೂಹಲ ಮೂಡಿ ಅವರ ಹೆಚ್ಚಿನ ಕಲಿಕೆಗೆ ಪ್ರೇರಕವಾಗುತ್ತದೆ ಎಂದೂ ಹೇಳಿದರು. ಮಕ್ಕಳಿಗೆ ನಾವು ಕಲಿಸುವುದಕ್ಕಿಂತ ಹೆಚ್ಚಿನದನ್ನು ಅವರು ತಾವಾಗಿಯೇ ಕಲಿಯುತ್ತಾರೆ. ಆದುದರಿಂದ ಅವರಿಗೆ ಕಲಿಯುವ ಅವಕಾಶಗಳನ್ನು ಸೃಷ್ಟಿಸಿಕೊಡಬೇಕು. ಈ ನಿಟ್ಟಿನಲ್ಲಿ ಚಿಣ್ಣರ ಚೇತನ ಒಂದು ಶ್ಲಾಘನೀಯ ಪ್ರಯತ್ನ ಎಂದು ಪ್ರಶಂಸೆ ಮಾಡಿದರು.

ಚಿಣ್ಣರ ಚೇತನ ಪತ್ರಿಕೆಯ ಹುಟ್ಟು ಮತ್ತು ಬೆಳವಣಿಗೆಯನ್ನು ಪ್ರಸ್ತಾಪಿಸಿದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಏಕಕಾಲಕ್ಕೆ ಇದು ಪ್ರಕಟವಾಗಲಿದೆ ಎಂದರು. ಕಾರ್ಯಕ್ರಮದಲ್ಲಿ ಅನಂತಪಥ ಪತ್ರಿಕೆಯ ಸಂಪಾದಕರಾದ ಟಿ. ಎಸ್. ಗೋಪಾಲ್, ಡಾ. ಇಂದುಮತಿ, ಶ್ರೀ ಜಿ ಎಂ ಇನಾಂದಾರ್, ಅದಮ್ಯ ಚೇತನದ ಸ್ವಯಂ ಸೇವಕರಾದ ರಾಜು ಬನ್ನೂರು ಮತ್ತು ಸಂಸ್ಥೆಯ ಸಿಬ್ಬಂದಿಗಳು ಭಾಗವಹಿಸಿದ್ದರು.

**ಸೂಚನೆ: ಚಿಣ್ಣರ ಚೇತನ ಗೋಡೆ ಪತ್ರಿಕೆಗೆ ವಾರ್ಷಿಕವಾಗಿ 1000 ರೂಪಾಯಿಗಳನ್ನು ದೇಣಿಗೆ ನೀಡುವ ಮೂಲಕ ಪೋಷಕರಾಗಬಹುದು. ಹೆಚ್ಚಿನ ಮಾಹಿತಿಗೆ: 8904623967 ಸಂಪರ್ಕಿಸಿ.**

**ಇತರ ಕಾರ್ಯಕ್ರಮಗಳು**

ಸಂಸ್ಥೆಯ ನಿಗದಿತ ಕಾರ್ಯಕ್ರಮಗಳಾದ ದೇಗುಲ ದರ್ಶನ, ಭಗವದ್ಗೀತೆಯ ಪಠಣ ಮತ್ತು ಶ್ರೀ ಚೇತನ ಸಭೆಗಳು ಎಂದಿನಂತೆ ಜರುಗಿದವು.

**ತೇಜಸ್ವಿನಿ ಅನಂತಕುಮಾರ್ ಅವರಿಗೆ ಪ್ರಶಸ್ತಿ ಪ್ರದಾನ**

ಸಮಾಜದ ಅಪೇಕ್ಷಿತ ಸೇವೆಗಾಗಿ ಹಾಗೂ ಪರಿಸರದ ಬಗೆಗಿನ ಸುಸ್ಥಿರ ಕಾಳಜಿಗಾಗಿ ಜನಾರ್ದನ್ ರೈ ನಗರ್ ರಾಜಸ್ಥಾನ ವಿದ್ಯಾಪೀಠವು ಸ್ಥಾಪಿಸಿರುವ 'ಜನಾರ್ದನ್ ರೈ ನಗರ ಸಂಸ್ಕೃತಿ ರತ್ನ ಸಮ್ಮಾನ್' ಪ್ರಶಸ್ತಿಯನ್ನು ಉದಯಪುರದಲ್ಲಿ ಅದಮ್ಯ ಚೇತನದ ಅಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರಿಗೆ ನೀಡಿ ಗೌರವಿಸಲಾಯಿತು.

**ಗಣ್ಯರ ಭೇಟಿ**

ಏರೋನಾಟಿಕಲ್ ಡೆವಲಪ್ಮೆಂಟ್ ಏಜೆನ್ಸಿ(ADA) ಕಾರ್ಯಕ್ರಮ ನಿರ್ದೇಶಕರಾದ ಶ್ರೀ ಜಿತೇಂದ್ರ ಜೆ. ಜಾಧವ್, ತಂತ್ರಜ್ಞಾನ ನಿರ್ದೇಶಕ ಶ್ರೀ ಶಂಕರಯ್ಯ ಮಾಡ, ಡಿ.ಆರ್.ಡಿ.ಓ, ಸಿ.ಎ.ಬಿ.ಎಸ್ ಮಾಜಿ ನಿರ್ದೇಶಕರಾದ ಡಾ. ಕೆ. ರಾಮಚಂದ್ರರಾವ್, ತೇಜಸ್ ಮಾರ್ಕ್ 2 ಯೋಜನಾ ನಿರ್ದೇಶಕರಾದ ಡಾ. ಮಧುಸೂಧನ್ ರಾವ್, ರಾಷ್ಟ್ರೀಯ ವೈಮಾನಿಕ ಪ್ರಯೋಗಾಲಯದ ಮಾಜಿ ನಿರ್ದೇಶಕರಾದ ಡಾ. ಎ. ಆರ್ ಉಪಾಧ್ಯ ಹಾಗೂ ವಿಜ್ಞಾನಿ ಡಾ. ರಘೋತ್ತಮ್ ರಾವ್ ಅವರು ಜೂನ್ 08 ರಂದು ಅನಂತ ಪ್ರೇರಣಾ ಕೇಂದ್ರಕ್ಕೆ ಭೇಟಿ ನೀಡಿದ್ದರು.

**ಶ್ರದ್ಧೆಯ ಶಿಲ್ಪ**

ಅದಮ್ಯ ಚೇತನದ ಪ್ರಾಯೋಜಿಸುವ ಶ್ರದ್ಧೆಯ ಶಿಲ್ಪ ಬಾನುಲಿ ಕಾರ್ಯಕ್ರಮ ಸರಣಿ ಪ್ರತಿ ಮಂಗಳವಾರ ಮುಂಜಾನೆ 6.35ಕ್ಕೆ ಮತ್ತು ಸಂಜೆ 6.10ಕ್ಕೆ ಮೈಸೂರು ಆಕಾಶವಾಣಿಯಿಂದ ಬಿತ್ತರಗೊಳ್ಳುತ್ತದೆ. ಇದರಲ್ಲಿ ಕರ್ನಾಟಕದ ಹಲವು ಪುರಾತನ ದೇವಾಲಯಗಳನ್ನು ಪರಿಚಯಿಸಲಾಗುತ್ತಿದೆ.

**ಪ್ಲೇಟ್ ಬ್ಯಾಂಕ್**

ಬೆಂಗಳೂರಿನ ವಿವಿಧೆಡೆ ನಡೆಯುವ ಕಾರ್ಯಕ್ರಮಗಳಲ್ಲಿ ಅದಮ್ಯ ಚೇತನದ ತಟ್ಟೆ ಮತ್ತು ಲೋಟಗಳು ಬಳಕೆಯಾಗುತ್ತಿವೆ. ಮೇ ತಿಂಗಳಲ್ಲಿ 27 ಖಾಸಗೀ ಕಾರ್ಯಕ್ರಮಗಳಿಗೆ 5,230 ತಟ್ಟೆ, 8,990 ನೀರಿನ ಲೋಟ, 3,645 ಕಾಫಿ ಲೋಟ, 4,277 ಬಟ್ಟಲು, 3,680 ಚಮಚಗಳನ್ನು ಸಾರ್ವಜನಿಕರು ಪಡೆದಿದ್ದರು.



**ದೇಗುಲ ದರ್ಶನ ಕಾರ್ಯಕ್ರಮದ ಅಂಗವಾಗಿ ಅದಮ್ಯ ಚೇತನದ ವತಿಯಿಂದ ಚನ್ನರಾಯಪಟ್ಟಣ ಮತ್ತಿತರ ಸ್ಥಳಗಳ ಪುರಾತನ ದೇಗುಲಗಳಿಗೆ ಭೇಟಿ ನೀಡಿ ಅಲ್ಲಿನ ಅರ್ಚಕರನ್ನು ಗೌರವಿಸಲಾಯಿತು.**

## ನಿತ್ಯ ಅನ್ನದಾನವೆಂಬ ನಿರಂತರ ಸೇವಾಕಾರ್ಯ

| ಕ್ರ. ಸಂ | ನಿತ್ಯ ಅನ್ನದಾನದ ಕೇಂದ್ರ/ ಊಟದ ಸಮಯ | ಮೇ ತಿಂಗಳಲ್ಲಿ ವಿತರಣೆಯಾದ ಊಟದ ಅಂದಾಜು ಸಂಖ್ಯೆ | ಇಂದಿನ ವರೆಗೆ ವಿತರಣೆಯಾದ ಒಟ್ಟು ಊಟದ ಅಂದಾಜು ಸಂಖ್ಯೆ |
|---|---|---|---|
| 1 | ಅದಮ್ಯ ಚೇತನ ಕೆಂಪೇಗೌಡ ನಗರ, ಗವಿಪುರ 2.00 ರಿಂದ 3.00 | 4,650 | 1,38,600 |
| 2 | ಜಯನಗರ 4ನೇ ಹಂತ, ಕನ್ನಡ ಕಟ್ಟೆ, ಜೈನ್ ಟೆಂಪಲ್ ಮುಂಭಾಗ 12.30 ರಿಂದ 1.30 | 3,000 | 90,500 |
| 3 | ನಗರ್ತಪೇಟೆ ಮುಖ್ಯರಸ್ತೆಯ ನಗರೇಶ್ವರ ದೇವಸ್ಥಾನ 12.30 ರಿಂದ 1.30 | 3,000 | 71,700 |
| 4 | ಶ್ರೀ ಲೇಕ್ ವ್ಯೂ ಮಹಾಗಣಪತಿ ದೇವಸ್ಥಾನ, ಟ್ಯಾಂಕ್ ಬಂಡ್ ರಸ್ತೆ ಹಲಸೂರು ಕೆರೆ ಪಕ್ಕ ಬೆಂಗಳೂರು 12.30 ರಿಂದ 1.30 | 4,650 | 20,550 |
| 5 | ಅನಂತ ಪ್ರೇರಣಾ ಕೇಂದ್ರ ಸೌತ್ ಎಂಡ್ ವೃತ್ತ 12.45 ರಿಂದ 2.00 (ಕಾಲೇಜು ವಿದ್ಯಾರ್ಥಿಗಳಿಗೆ ಮಾತ್ರ) | 1,080 | 13,560 |
| | **ಒಟ್ಟು ಅಂದಾಜು** | **16,380** | **3,34,910** |

## ಅದಮ್ಯ ಸೇವಾ

( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )





ಲಂಡನ್ನಿನ ಥೇಮ್ಸ್ ನದಿ ತೀರದಲ್ಲಿರುವ ಶ್ರೀ ಬಸವೇಶ್ವರ ಪ್ರತಿಮೆಗೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಮಾಲಾರ್ಪಣೆ ಮಾಡಿದರು.



ವಿದ್ಯಾವರ್ಧಕ ಸಂಘದ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ 100 ಔಷಧೀಯ ಸಸ್ಯಗಳನ್ನು ಮಕ್ಕಳಿಗೆ ವಿತರಿಸಲಾಯಿತು.



ಅದಮ್ಯ ಚೇತನದ ಹಸಿರು ಭಾನುವಾರ ಕಾರ್ಯಕ್ರಮದಲ್ಲಿ ಜಯನಗರ ವಿಧಾನಸಭಾ ಕ್ಷೇತ್ರದ ನೂತನ ಶಾಸಕರಾಗಿ ಆಯ್ಕೆಯಾಗಿರುವ ಶ್ರೀ ಸಿ.ಕೆ ರಾಮಮೂರ್ತಿ, ಅದಮ್ಯ ಚೇನನ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಭಾಗವಹಿಸಿದ್ದರು.



ದೇಶದ ವೈಮಾನಿಕ ಕ್ಷೇತ್ರದ ಹೆಸರಾಂತ ವಿಜ್ಞಾನಿಗಳು ಅನಂತ ಪ್ರೇರಣಾ ಕೇಂದ್ರಕ್ಕೆ ಭೇಟಿ ನೀಡಿದ ಸಂದರ್ಭದ ಚಿತ್ರ



ಅದಮ್ಯ ಚೇತನದ ಚಿಣ್ಣರ ಚೇತನ ಗೋಡೆ ಪತ್ರಿಕೆಯ ಹೊಸ ಸರಣಿ ಯ ಸಂಚಿಕೆಯನ್ನು ಇತ್ತೀಚೆಗೆ ಬಿಡುಗಡೆ ಮಾಡಲಾಯಿತು.



ಅನಂತಕುಮಾರ್ ಪ್ರತಿಷ್ಠಾನದ ವತಿಯಿಂದ ಹುಬ್ಬಳ್ಳಿ ವಿಭಾಗದ ಗ್ರಾಮಪಂಚಾಯತ್ ಮಹಿಳಾ ಸದಸ್ಯರಿಗಾಗಿ ನೇತೃತ್ವ ವಿಕಸನ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಇದರ ಉದ್ಘಾಟನೆಯ ಸಂದರ್ಭದಲ್ಲಿ ಹುಬ್ಬಳ್ಳಿಯ ಉಪಮೇಯರ್ ಶ್ರೀಮತಿ ಉಮಾ ಮುಕುಂದ್, ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಡಾ. ವಿಷ್ಣು ಕಾಂತ ಚಟಪಲ್ಲಿ, ಶ್ರೀ ಪ್ರಭಾಕರ ದೇಶಪಾಂಡೆ, ಶ್ರೀ ಪ್ರಕಾಶ ಭಟ್ ಮೊದಲಾದವರು ಉಪಸ್ಥಿತರಿದ್ದರು.

## ಅನಂತ ಚಿತ್ರಸಂಪುಟ

ಬೆಂಗಳೂರಿನ ಪರಿಸರವನ್ನು ಹಸಿರುಗೊಳಿಸುವ ನಿರಂತರ ಶ್ರಮದಾನಕ್ಕೆ ಶ್ರೀ ಅನಂತಕುಮಾರ್ ಕೊಟ್ಟ ಹೆಸರು ಸಸ್ಯಾಗ್ರಹ. ಪ್ರತಿ ಭಾನುವಾರ ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿ ಹಮ್ಮಿಕೊಳ್ಳುತ್ತಾ ಬಂದಿರುವ ಈ ಕಾರ್ಯಕ್ರಮದಲ್ಲಿ ಅನಂತಕುಮಾರರೊಡನೆ ನಾಡಿನ ಅನೇಕ ಗಣ್ಯರು ಭಾಗವಹಿಸುತ್ತಿದ್ದರು.









